## VOTING OF DEMANDS FOR SUPPLEMENTARY AND ADDITIONAL GRANTS FOR THE YEAR 1951-52.

**Mr. SPEAKER** (the Hon'ble Sri V. Venkatappa).—Voting of Demands for Supplementary and Additional Grants for 1951-52.

### Demand No. 7—Other Taxes and Duties.

**The Hon'ble Sri H. C. DASAPPA** (Minister for Finance and Industries).—Sir, on the recommendation of His Highness the Maharaja, I move:

"That a supplementary sum not exceeding Rs. 2,130 be granted to the Government to defray the charges which will come in course of payment during the year ending 31st day of March 1952, in respect of 'Other Taxes and Duties'."

Sir, details have been furnished in the Supplementary Estimates. It will be seen that what was sanctioned for the year 1950-51 could not be spent that year because the bills came up a little too late for that year; so, the budget provision for that year is not sufficient to meet this little extra charge. After all it is a small sum of Rs. 2,130 to be defrayed on some iron safes and a duplicator.

**Mr. SPEAKER.**—Motion moved:

"That a supplementary sum not exceeding Rs. 2,130 be granted to the Government to defray the charges which will come in course of payment during the year ending 31st day of March 1952, in respect of 'Other Taxes and Duties'."

**Sri A. BHEEMAPPA NAIK** (Chitaldrug District—General).—Sir, may I request you to postpone the consideration of the Supplementary Demands for tomorrow?

**Mr. SPEAKER.**—Then, what is the work for today?

### Non-inclusion of the expenditure in Budget Estimate for 1951-52.

**Janab SYED ABDUR RAHMAN** (Chikmagalur *cum* Shimoga—Muslim).—I move:

"That the demand under the head '13. Other Taxes and Duties" for Rs. 2,130 be reduced by Rs. 100 (to raise a discussion as to why this expenditure incurred in 1950-51 was not foreseen and included in the Budget Estimate for 1951-52)."

In moving this cut motion, my only object is this. Article 208 of the Indian Constitution says that there are two categories of expenses which could be brought under that particular rule. In the Memorandum placed before this Hon'ble House, in an introductory note regarding the supplementary grants, it is stated that this grant could be moved under article 208 of the Indian Constitution. There are two categories, *viz.*, when the original appropriation is found to be insufficient for the expenditure, that is one category and the other category is when an expenditure has to be incurred upon a new service not originally contemplated. The Hon'ble Finance Minister was just now pleased to say that this is a small item and therefore not much notice need be taken of it.

**The Hon'ble Sri H. C. DASAPPA.**—No, no.

**Janab SYED ABDUR RAHMAN.**—I have raised a very technical objection with regard to this. I am not against the grant.

**The Hon'ble Sri H. C. DASAPPA.**—The Hon'ble Member is putting into my mouth words which I did not say. I said it is a small item no doubt. I have already stated that the purchases should have been made in 1950-51, but that the bills came too late to be paid for during the year for which there was provision.

**Janab SYED ABDUR RAHMAN.**—My objection was only with regard to the sanctioned item of expenditure for 1950-51. The Government knew that this item of expenditure had already been sanctioned and therefore this could have been brought in as an additional grant and passed in the year 1950-51....

.....

**The Hon'ble Sri H. C. DASAPPA.**—The payment was to be made in the current year. The bills did not come up for payment in time.

**Janab SYED ABDUR RAHMAN.**—When the Government placed an order for the purchase of 9 iron safes, they knew full well that they were going to incur that expenditure and when they knew it, could not this sum of Rs. 2.000 and odd have been included in that

Rs. 30,000 Contingency Grant which had been allotted towards the expenditure?

**The Hon'ble Sri H. C. DASAPPA.**— You can say what you want to, I will answer.

**Janab SYED ABDUR RAHMAN.**— What I want to say is that this item could not come under a supplementary grant; this could come under an additional grant for the year 1950-51 and so it should have been brought as an additional grant for 1950-51 or at least some provision for this should have been made in 1951-52 budget.

**The Hon'ble Sri H. C. DASAPPA.**— That is what has been done exactly for 1951-52.

**Janab SYED ABDUR RAHMAN.**— But you are having it as supplementary grant for 1951-52 having got sanction for it in 1950-51. You have already sanctioned the item of expenditure. Article 208 of the Indian Constitution says that it is only in respect of two particular items of expenditure that you can seek sanction of the Legislature. This is for the year 1950-51 and when you knew definitely well that you had incurred an expenditure to this extent, why was this not included in the budget for the year 1951-52? That is the clarification I need from the Hon'ble Finance Minister.

**Mr. SPEAKER.**—Cut motion moved:

"That the demand be reduced by Rs. 100."

**The Hon'ble Sri H. C. DASAPPA.**— I never anticipated such a strange criticism as the one my Hon'ble friend there has brought up. It is so well known that the budget is placed before this Legislature in the month of March and not after March. We will have provided a certain amount of money under this head for the year 1950-51. We expect that that provision is sufficient for the purpose of meeting the various requirements of the particular department. Now what happens sometime is that while orders are placed, the bills will not have come in March itself. We anticipate that the bills will be presented by the end of March and paid for by the end of March. That is our anticipation. Now not all of our anticipations in this strange world do come up true. And therefore in this case while there was ample provision for meeting this requirement in the year 1950-51, the bills did not appear in 1950-51. Now what is to happen? Whatever surplus is there in the department, lapses. In the budget for the year 1951-52 we did not anticipate this somewhat unusual item of expenditure, *viz.*, non-payment of the bills in the year 1950-51. We provided for the normal rsquirements of the department and that is to the tune of Rs. 30,000. It so happened here that the item of expenditure which we anticipated to go into the year 1950-51 appeared in the year 1951-52. But the Rs. 30,000 provision which we had provided for was required for the other normal requirements and not this unanticipated item of expenditure and therefore it is one of those items which does come under article 205 and not article 208. I may tell the Hon'ble Member that it comes under article 205. I see nothing wrong. It is perfectly in order and it is only such items that come in the shape of supplementary or additional grants.

**Janab SYED ABDUR RAHMAN.**— When the Government place an order for certain requirements of theirs, do they not know what the prices of those articles are? When this item of expenditure was sanctioned in the year 1950-51 and when you were framing the budget for the year 1951-52 you had knowledge of the fact that you had placed an order for these 9 iron safes. This thing could have been provided for in the budget of 1951-52.

**The Hon'ble Sri H. C. DASAPPA.**— We expected that these bills would be presented in March 1951. I think it is a very simple thing.

**Janab SYED ABDUR RAHMAN.**— You say that it is a supplementary grant, but it cannot come under a supplementary grant. It could come in here as a regular grant for 1951-52.

**The Hon'ble Sri H. C. DASAPPA.**— Article 205 says:

".....If the amount authorised by any law made in accordance with the provisions of article 204 to be expended for a particular service for the current financial year is found to be insufficient

(THE HON'BLE SRI H. C. DASAPPA).

for the purposes of that year or when a need has arisen during the current financial year for supplementary or additional expenditure upon some new service not contemplated..... ....',

It is not a new service.

**Janab SYED ABDUR RAHMAN.**—You knew of this fact before you framed the budget for 1951-52. You knew that you were incurring this expenditure.

**The Hon'ble Sri H. C. DASAPPA.**—We could not have anticipated the fact that this item of expenditure would have to be met in the year 1951-52.

**Janab SYED ABDUR RAHMAN.**—You said that it is a sanctioned item of expenditure.

**The Hon'ble Sri H. C. DASAPPA.**—It is sanctioned already but to be paid for during the year 1951-52.

**Janab SYED ABDUR RAHMAN.**—So I take it that this should have been a regular grant provided for for the year 1951-52. It cannot be a supplementary grant.

**The Hon'ble Sri H. C. DASAPPA.**—It is a thing which has arisen during the course of the year because of non-payment during the previous year and therefore if you read article 205, you will see that it makes no special distinction between the two. It is not a new service and therefore it becomes supplementary or additional and it has got to be sanctioned.

**Mr. SPEAKER.**—What does the Hon'ble Member propose to do with his cut motion?

**Janab SYED ABDUR RAHMAN.**—I have said I will not pursue the matter. I seek the leave of the House to withdraw the cut motion.

*The cut motion was, by leave, withdrawn.*

---

**Mr. SPEAKER.**—The question is:

"That a supplementary sum not exceeding Rs. 2,130 be granted to the Government to defray the charges which will come in course of payment during the year ending 31st day of March 195 , in respect of 'Other Taxes and Duties".

*The motion was adopted.*

---

## Demand No. 8 Irrigation.

**The Hon'ble Sri T. MARIAPPA** (Home Minister).—Sir, on the recommendation of His Highness the Maharaja, I move:

"That a supplementary sum not exceeding Rs. 17,50,000 be granted to the Government to defray the charges which will come in course of payment during the year ending 31st day of March 1952, in respect of "Irrigation".

As explained in the Explanatory Note furnished to this demand, the Government of India under the Grow More Food campaign have sanctioned certain schemes and this particular scheme has not yet been sanctioned and they have assured us that it is likely to be sanctioned:

"Government of India have assured a grant to Rs. 26 lakhs for improvement of channels, tanks, etc., In the Budget for 1951-52, a total lumpsum provision of Rs. 28·75 lakhs had been made under this head and 19 Irrigation Navigation, Embankment and Drainage Works—Financed from Ordinary Revenue, excluding provisions aggregating about Rs. 7 lakhs for certain individual works as against the total grant of Rs. 52 lakhs required according" .....

In fact we have already drawn up a scheme for 52 lakhs.

"..... to the programme. The total expenditure against the lumpsum provision excluding individual works from April to June is Rs. 10·87 lakhs. In order that the Government of India grant may be fully utilised and the works in progress pushed through to useful stages, an additional grant of Rs. 17·50 lakhs is necessary under this head".

Therefore I commend this demand to the acceptance of the House.

**Mr. SPEAKER.**—Motion moved:

"That a supplementary sum not exceeding Rs. 17,50,000 be granted to the Government to defray the charges which will come in course of payment during the year ending 31st day of March 1952, in respect of "Irrigation".

**Sri L. SIDDAPPA** (Shimoga District—General).—Please let us know the various works for which you have brought this scheme.

---

## Definite Plan for Expansion and Improvement of Dams.

*Sri T. MADIAH GOWDA (Bangalore District—General).—I move the cut motion standing against my name. It reads thus:

"That the demand under the head '8, Other Revenue Expenditure financed from Ordinary

Revenue' for Rs. 17,00,000 be reduced by Rs. 100 (to ascertain whether the Government have any definite plan for extension and improvement of dams, etc., the entire work being distributed to cover all parts of the State."

ಸ್ವಾಮಿ, ಈ ವಿಚಾರಕ್ಕೆ ಬೆಳೆ ಉತ್ಪತ್ತಿಮಾಡತಕ್ಕ ಯೋಜನೆ ಪ್ರಕಾರ ಮತ್ತು ದೇಶದ ದವಸ ಧಾನ್ಯಗಳ ಸಂಪತ್ತನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದ ಸರ್ಕಾರದವರು ಈಚೆಗೆ ವಿಶೇಷ ಹಣ ಖರ್ಚುಮಾಡುತ್ತಿರುವುದು ಅದರಲ್ಲೂನೂ ಭಾರತ ಸರ್ಕಾರದವರು ನಮ್ಮ ಸರ್ಕಾರಕ್ಕೆ ವಿಶೇಷವಾಗಿ ಹಣ ಒದಗಿಸುತ್ತಿರುವುದು ಪ್ರೇಧ್ಯವಾಗಿದೆ. ಹೀಗೆ ಖರ್ಚಾಗುವ ಹಣ ಬಹಳಮಟ್ಟಿಗೆ ದೇಶದ ಅಭಿವೃದ್ಧಿಗೆ ಸಾಧಕವಾಗತ್ತದೆ. ದೇಶದ ಸಂಪತ್ತು ಹೆಚ್ಚುತ್ತದೆ, ಜನಗಳಲ್ಲಿ ಒಂದು ವಿಧವಾದ ಸುಭಿಕ್ಷೆ, ಶಾಂತಿ, ಹೆಚ್ಚುತ್ತದೆ ಎನ್ನುವುದರಲ್ಲಿ ಅಭ್ಯಂತರವಿಲ್ಲ. ಆದರೆ ಏನು ಹಣ ಭಾರತ ಸರ್ಕಾರದವರು ನಮಗೆ ಕೊಡುತ್ತಾರೆಯೋ ಮತ್ತು ನಮ್ಮ ಸರ್ಕಾರದ ವರಮಾನದಿಂದ ಏನು ಹಣವನ್ನು ಖರ್ಚುಮಾಡುತ್ತಾರೆಯೋ ಆ ಹಣ ಯಾವ ರೀತಿ ವಿನಿಯೋಗವಾಗುತ್ತಿದೆ, ಸರ್ಕಾರದವರು ಒಂದು ಕಟ್ಟುನಿಟ್ಟಾದ ಯೋಜನೆಯನ್ನು ತಮ್ಮ ಮುಂದಿಟ್ಟುಕೊಂಡು ಆ ಯೋಜನೆಯನ್ನು ನರಿಯಾಗಿ ನಡೆಸಿಕೊಂಡು ಹೋಗಿ ಹಣ ನರಿಯಾಗಿ ಖರ್ಚುಮಾಡುತ್ತಾರೆಯೆ, ಇಲ್ಲವೆ ಎಂದು ಈ ಸಭೆಯ ಮಾನ್ಯ ಸದಸ್ಯರು ಸ್ವಲ್ಪ ತಿಳಿದುಕೊಳ್ಳುವುದು ಅತ್ಯಂತ ಅಗತ್ಯ. ಅಂದ ಮಾತ್ರಕ್ಕೆ ಈ ಹಣವನ್ನು ಯಾವ ಕೆಲವು ಭಾಗದಲ್ಲಿ ಮಾತ್ರ ಖರ್ಚುಮಾಡುವುದು ಅಗಲು ಯಾವುದೋ ಕೆಲವು ಯೋಜನೆಗಳಿಗೆ ಖರ್ಚು ಮಾಡುವುದು ಅಗಲ ಸರಿಯಿಲ್ಲ. ಈ ಯೋಜನೆಗಳಿದ್ದರೂ ಸ್ಪಷ್ಟವಾಗಿರಬೇಕು ಮತ್ತು ಸರ್ವೇಸಾಧಾರಣವಾಗಿ ದೇಶದ ಎಲ್ಲಾ ಪ್ರಾಂತದ ಜನಗಳಿಗೂ ಕೂಡ ಅದರ ಪ್ರತಿಫಲ ದೊರೆಯುವಂತಾಗಬೇಕು ಎಂಬುದು ಈ ಖೋತಾ ನಿರ್ಣಯದ ಅಭಿಪ್ರಾಯವಾಗಿದೆ. ಈ ಖೋತಾ ನಿರ್ಣಯದಲ್ಲಿ ನಾವು ಸರ್ಕಾರವನ್ನು ಕೇಳುವುದಿಷ್ಟೆ, ತಾವು ಹಣವನ್ನು ಖರ್ಚುಮಾಡಿರುವುದು ಮತ್ತು ಮುಂದೆ ಮಾಡುವುದು ಯಾವ ರೀತಿ ಈ ಬಾಬಿಗೆ ಏನಿ ಯೋಗವಾಗುತ್ತಿದೆ ? ಅದಕ್ಕೆ ಸ್ಪಷ್ಟವಾಗಿ ಮುಂದಾ ಲೋಚನೆಯಿಂದ ಒಂದು ನೀತಿಯನ್ನು ಹಾಕಿಕೊಂಡಿದ್ದೀರಾ? ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳಲ್ಲೂ, ಎಲ್ಲಾ ಪ್ರಾಂತಗಳಲ್ಲೂ ಅದರಲ್ಲೂ ಎಲ್ಲೆ ಅತ್ಯಂತ ಆವಶ್ಯಕತೆಯಿರುತ್ತದೋ ಅಂಥ ಸ್ಥಳಗಳಲ್ಲಿ ಈ ಹಣ ವಿನಿಯೋಗವಾಗುತ್ತಿದೆಯೇ ಹೇಗೆ ಎಂಬುದನ್ನು ಸರ್ಕಾರದವರು ತಿಳಿಸಬೇಕಾದ್ದು ಅಗತ್ಯವಾಗಿದೆ. ಅದರಲ್ಲೂ ಕೂಡ ಅಣೆಕಟ್ಟುಗಳು, ನದಿಗಳ ನಾಲೆಗಳು, ಕೆರೆಗಳ ಅಭಿವೃದ್ಧಿ ಇವುಗಳಿಗಾಗಿ ಈ ಹಣ ಮೀಸಲಾಗಿದೆಯೆಂದು ಹೇಳಿದ್ದಾರೆ. ಇವು ಬಹಳ ಪ್ರಾಮುಖ್ಯವಾದ ಬಾಬುಗಳು. ಈ ಕಾರ್ಯಗಳಿಗಾಗಿ ಇಷ್ಟು ದೊಡ್ಡ ಮೊಬಲಗು ಖರ್ಚಾಗುತ್ತದೆ. ಆದ್ದರಿಂದ ಖರ್ಚು ಮಾಡಿರುವ ಹಣ ನಿಜವಾಗಿಯೂ ಯಾವ ರೀತಿಯಲ್ಲಿ ಖರ್ಚಾಗುತ್ತಿದೆ ಹೇಗೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾದ್ದು ಅಗತ್ಯ. ಅದನ್ನು ಸರ್ಕಾರದವರು ಸ್ಪಷ್ಟವಾಗಿ ವಿಶದವಾಗಿ ತಿಳಿಸಬೇಕು ಎಂಬ ಉದ್ದೇಶದಿಂದ ನಾನು ಈ ಖೋತಾ ಸೂಚನೆಯನ್ನು ಮಂಡಿಸುತ್ತೇನೆ.

Mr. SPEAKER.—Cut motion moved.—

"That the demand be reduced by Rs. 100".

*ಶ್ರೀ ಎರ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಈ ಖೋತಾ ನಿರ್ಣಯವನ್ನು ಪುಷ್ಟೀಕರಿಸುತ್ತಾ ನಾನು ಒಂದು ವಿಷಯ ಹೇಳಬೇಕೆಂದಿದ್ದೇನೆ. ನನ್ನ ಮಾನ್ಯ ಸ್ನೇಹಿತರು ಹೇಳಿದ ಹಾಗೆ ಈ ಬಾಬಿನಲ್ಲಿ ಸರ್ಕಾರದವರು ಹೇರಳವಾದ ಹಣ ಖರ್ಚು ಮಾಡುತ್ತಿದ್ದಾರೆ. ಆ ಬಾಬಿನಲ್ಲಿ ನಾವು ಖರ್ಚುಮಾಡುವ ಹಣದ ಅರ್ಧದಷ್ಟು ಪ್ರತಿ ವರ್ಷವೂ ನಮಗೆ ಕೇಂದ್ರ ಸರ್ಕಾರದಿಂದ ಗ್ರಾಂಟು ರೂಪವಾಗಿ ಬರುತ್ತಿದೆ. ಆದರ ಪ್ರತಿಫಲ ಸಂಸ್ಥಾನದಲ್ಲಿ ಎಲ್ಲ ಕಡೆಗೂ ಸರಿಯಾಗಿ ದೊರೆಯುವಂತೆ ಮಾಡಬೇಕಾದ್ದು ಬಹಳ ಆವಶ್ಯಕ. ಅಂಥ ಒಂದು ಪ್ಲಾನು ಮತ್ತು ಯೋಜನೆ ಸರ್ಕಾರದವರು ತಯಾರಿಸಿ ಈ ಸಭೆಯ ಮುಂದಿಟ್ಟು ಸಾಧ್ಯವಾದರೆ ಈ ಸಭೆಯು ಒಪ್ಪಿಗೆ ಸಹ ಪಡೆದು ಕೆಲಸಮಾಡುವುದು ಸರಿಯುವುದು ಬಹಳ ಆವಶ್ಯಕ ಎಂಬುದು ನನ್ನ ಅಭಿಪ್ರಾಯ. ಕಳೆದ ಜನವರಿ ಅಧಿವೇಶನದಲ್ಲಿ ಈ ಸಭೆಯ ಮಾನ್ಯ ಸದಸ್ಯರಾದ ಶ್ರೀ ಕರಿಯಪ್ಪನವರು ಒಂದು ಪ್ರಶ್ನೆ ಕಳುಹಿಸಿದ್ದರು. ಅದಕ್ಕೆ ಜವಾಬಾಗಿ ಸರ್ಕಾರದವರು ಕೊಟ್ಟಿರುವ ಉತ್ತರವನ್ನು ನೋಡಿದರೆ ಕೆಲವು ಬಾಬುಗಳಿಗೆ ಹೇರಳವಾದ ಮೊಬಲಗು ಒಂದೆರಡು ಜಿಲ್ಲೆಗಳಲ್ಲೇ ಖರ್ಚಾಗುತ್ತಿದೆ, ಬಾಕಿ ಜಿಲ್ಲೆಗಳಲ್ಲಿ ಹಣ ಖರ್ಚಾಗುವುದಕ್ಕೆ ಅವಕಾಶವಿಲ್ಲ ಎಂದು ಕಂಡುಬರುತ್ತದೆ. ಕೆಲವು ಬಾಬುಗಳಲ್ಲಿ ಕೆಲವು ಜಿಲ್ಲೆಗಳಲ್ಲಿ ಖರ್ಚಾಗುವುದು ಅನಿವಾರ್ಯ. ಅದನ್ನು ಒಪ್ಪುತ್ತೇನೆ. 'Improvements to river channels' ಎಂಬ ಐಟಂ ಇರುತ್ತದೆ. ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ನದಿಗಳ ನಾಲೆಗಳು ಹೆಚ್ಚು. ಆ ಬಾಬುಗಳಿಗೆ ಹೆಚ್ಚಾಗಿ ಆ ಎರಡು ಜಿಲ್ಲೆಗಳಲ್ಲಿ ಖರ್ಚಾಗುವುದು ಅನಿವಾರ್ಯ. ಯಾವರೀತಿ ಆ ಬಾಬಿಗೆ ಆ ಎರಡು ಜಿಲ್ಲೆಗಳಲ್ಲಿ ಹೆಚ್ಚು ಹಣ ಒದಗಿಸಬೇಕಾದ್ದು ಆವಶ್ಯಕವಾಗಿದೆಯೋ ಅದೇರೀತಿ ಬೇರೆ ಜಿಲ್ಲೆಗಳಲ್ಲಿ ಯಾವ್ಯಾವ ಆವಶ್ಯಕತೆಯಿದೆ ಎಂಬುದನ್ನು ನೋಡಿ ಆ ಆವಶ್ಯಕತೆಗಳನ್ನು ಪೂರೈಸುವ ಹಾಗೆ ತಕ್ಕ ಏರ್ಪಾಡು ಮಾಡುವುದು ಬಹಳ ಆವಶ್ಯಕ. ಈ ಸಂಬಂಧದ ಪ್ರಶ್ನೆಗೆ ಜವಾಬಾಗಿ ಕೊಟ್ಟಿರುವ ಉತ್ತರವು ಪ್ರೊಸೀಡಿಂಗ್ಸಿನ 285ನೆಯ ಪುಟದಲ್ಲಿ ಮುದ್ರಿತವಾಗಿದೆ. ಅದರ ಪ್ರಕಾರ ಏಳು ಬಾಬುಗಳಿಗೆ ಹಣ ಕೊಡುತ್ತಿದ್ದಾರೆ. ಆ ಬಾಬುಗಳು ಈ ರೀತಿಯಾಗಿವೆ:—

1. Major Irrigation Works.
2. Land Improvement Schemes.
3. Repairs and Improvements to River Channels.
4. Restoration of Minor Tanks.
5. Lift Irrigation in River Valleys.
6. Desilting of tanks.
7. I. C. F. Works (Minor repairs to sluices, waste weirs; etc.)

ಇದರಲ್ಲಿ ಮೊದಲು ಹೇಳಿದ ಹಾಗೆ Repairs and Improvements to river channelsಗೆ ಸಂಬಂಧಪಟ್ಟಂತೆ ನಂಜನಗೂಡು ಸಬ್‌ಡಿವಿಜನ್‌ನಲ್ಲಿ 191 ಐಟಂ ತೆಗೆದುಕೊಂಡು ಕೆಲಸಮಾಡಿದೆ. Upper cauveryನಲ್ಲಿ 94 ಐಟಂ; ಮಂಡ್ಯ 73 ಈರೀತಿಯಾಗಿರತಕ್ಕದ್ದು ಅನಿವಾರ್ಯ, ಒಪ್ಪುತ್ತೇನೆ ಆದರೆ ಐಟಂ ನಂಬರ್ 2—Land Improvement Schemesನ್ನು ನೋಡಿದರೆ ಹಾಸನ ಡಿಸ್ಟ್ರಿಕ್ಟ್‌ನಲ್ಲಿ 1; ಶಿವಮೊಗ್ಗ ಡಿಸ್ಟ್ರಿಕ್ಟ್‌ನಲ್ಲಿ ಯಾವ ಐಟಂ ಇಲ್ಲ; ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ನಲ್ಲಿ ಯಾವುದೂ ಇಲ್ಲ; ಚಿತ್ರದುರ್ಗ ಡಿಸ್ಟ್ರಿಕ್ಟ್‌ನಲ್ಲಿ 3 ಐಟಂ ಮಾತ್ರ; ಸಾಗರ ಡಿವಿಜನಿನಲ್ಲಿ ಯಾವ ಐಟಂ ಇಲ್ಲ; ದಾವಣಗೆರೆಯಲ್ಲಿ ಯಾವ ಐಟಂ ಇಲ್ಲ; ತುಂಗಾ ಅಣೆಕಟ್ಟಿನಲ್ಲಿ ಯಾವುದೂ ಇಲ್ಲ; ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ಯಾವುದೂ ಇಲ್ಲ;

(ಶ್ರೀ ಎಲ್. ಸಿದ್ದಪ್ಪನವರು).

ಕೋಲಾರದ ಡಿವಿಜನಿನಲ್ಲಿ ಒಂದು ಐಟಂ; ಬೆಂಗಳೂರು ಡಿವಿಜನಿನಲ್ಲಿ ಒಂದು ಐಟಂ; ಮೈಸೂರು ಡಿವಿಜನಿನಲ್ಲಿ ಎರಡು ಐಟಂ; ಮಂಡ್ಯ ಡಿವಿಜನಿನಲ್ಲಿ 69 ಐಟಂ; ನಂಜನಗೂಡು ಡಿವಿಜನಿನಲ್ಲಿ 6 ಐಟಂ; ಅಪ್ಪರ್ ಕಾವೇರಿನಲ್ಲಿ 7 ಐಟಂ; ಮಳವಳ್ಳಿ ಡಿವಿಜನಿನಲ್ಲಿ 84 ಐಟಂ; ಟನರ್ ಡಿವಿಜನಿನಲ್ಲಿ ಒಂದು ಐಟಂ; ಈರೀತಿ ಒಟ್ಟು 175 ಐಟಂ ಇದೆ. River channels ವಿಶೇಷವಾಗಿ ಮಂಡ್ಯ ಮತ್ತು ಮೈಸೂರು ಡಿಸ್ಟ್ರಿಕ್ಟ್‌ನಲ್ಲಿದ್ದು ಅಲ್ಲಿಗೆ ಹೇರಳವಾಗಿ ಹಣ ಒದಗಿಸಿರುವಂತೆಯೇ ಬೇರೆ ಐಟಂಗಳಲ್ಲಾದರೂ ಶಿವಮೊಗ್ಗಾ, ಚಿತ್ರದುರ್ಗ, ಚಿಕ್ಕಮಗಳೂರು ಡಿಸ್ಟ್ರಿಕ್ಟುಗಳಿಗೆ ಹಣ ಒದಗಿಸಬಹುದಾಗಿತ್ತು.

**The Hon'ble Sri T. MARIAPPA.**—May I correct one impression? Under land improvement schemes the most important is only putting up pick-ups and taking-up drainage works. We have taken up drainage works in Sulekere as Hon'ble Members are well aware. Therefore pick-ups usually come under land improvement schemes. This is one case where land is drained off and a pick-up is put to pick up the excess flow of water.

**Sri L. SIDDAPPA.**—There I differ from the Hon'ble Minister. It need not necessarily mean putting up only pick-ups. Supposing there are dry districts where there is black cotton soil; lands could be improved by having recourse to cantour bunding system.

**The Hon'ble Sri T. MARIAPPA.**—That is the reason why I corrected that impression. According to the scheme approved by the Government of India, we are precluded from taking up any other works of land improvement. For example, bunding up in Chitaldrug District and dry areas is not allowed. Land improvement schemes usually come up where excess water is going away. If the land has to be drained off and excess water to be picked-up, it is only where there is a possibility of putting up pick-ups. They come under land improvement schemes. All other things have not yet been approved by the Government of India. Therefore we have taken up such schemes where we can put up pick-ups and take up drainage works.

**Sri L. SIDDAPPA.**—Have the Government urged upon the Government of India that in so far as Mysore State is concerned where there are as many as four to five dry districts and where there is black cotton soil and where on account of soil erosion lands have very much deteriorated, contour bunding has to be included in land improvement schemes? I think if the Government had sufficiently urged on them.....

**The Hon'ble Sri T. MARIAPPA.**—More than once we had urged upon the Government of India the need for taking up this thing. In fact if only we had listened to the Government of India we should have taken up these irrigation works only in three districts in Mysore State, *via* Shimoga, Mandya and Mysore, because there is water and land susceptible to improvement. It is only with the greatest difficulty that we were able to convince them that it has to be spread over the State and concentrated wherever there is possibility of improvement.

**Sri L. SIDDAPPA.**—Even as it is, under land improvement scheme, there is not a single item taken up in Shimoga Division, not even one in Chikmagalur Division. If, as the Hon'ble Minister admitted, it is possible only in Mandya, Mysore and Shimoga Districts, why not even a single item has been taken up?

**The Hon'ble Sri T. MARIAPPA.**—In Sulekere, for ages water had not been drained off and the opinion of the previous Chief Engineers was that the bund should be cut open and the tank allowed to dry up for two years. With the help of our Engineers the problem has been solved without breaching the tank and the whole thing has become a smiling plain.

**Sri L. SIDDAPPA.**—In any case my submission is that if it is not possible to provide any grant either for the repair of these river channels or for land improvement, schemes in Shimoga and Chikmagalur Districts which are pending before Government may be sanctioned and taken up. For instance, for the information of the Government I submit that there is one beautiful scheme which is ripe for sanction in Shimoga District and I believe that scheme is in Tarikere-Jumpadahalla Project. It provides irrigation facilities to the extent of nearly 6,000 acres of

land. In Channagiri Taluk alone we have got three or four schemes. As I submitted yesterday in the course of my speech three schemes have been sanctioned by the Government about three or four years ago and one of them at any rate is Maranahalli Project. Four lakhs had been sanctioned in 1948.

**The Hon'ble Sri T. MARIAPPA.**— That is the first tank to be taken up under the five-year plan..

**Sri L. SIDDAPPA.**—It need not have been deferred up to be taken under the five-year scheme, about which we will discuss on the 5th or so; there is some change in the programme. When that project was sanctioned as early as 1948, I do not see why that at least should not have been taken up under the first item—major irrigation works. My submission is that the amount that the Government of India give for irrigation works must be evenly distributed in all the districts. I concede that it cannot be strictly distributed. But wherever there is a possibility the works should be taken up. When they provide ample funds for river channels and land improvement works in districts where there is scope for taking up these works, at least in other districts like Shimoga, Chitaldrug and Chikmagalur sufficient funds should be provided to take up some of these works, which are quite ripe for sanction and some of which though sanctioned have not yet been taken up. I submit that while spending these huge amounts, Government should prepare a plan for equitable distribution of funds in various districts, if possible obtaining the approval of the House for the scheme. I hope that Government will bear this in mind and see that while allocating funds, districts in the northern part of the State are not lost sight of.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಶ್ರೀ ಸಿದ್ಧಪ್ಪನವರು ಪ್ರಾರಂಭದಲ್ಲಿ ಮೈಸೂರು ಡಿಸ್ಟ್ರಿಕ್ಟ್‌ಗೆ ಖರ್ಚಾಗುವುದು ಅನಿವಾರ್ಯ ವೆಂದು ಹೇಳಿ, ಕೊನೆಯಲ್ಲಿ ಹೇಳುವಾಗ ಈ ಮೊಬಲಗನ್ನು ಸರಿಯಾಗಿ ಎಲ್ಲಾ ಕಡೆಯೂ ಸಂಸ್ಥಾನಾಮಳೆ ಹಂಚಬೇಕು ಎಂಬುದಾಗಿ ಹೇಳಿದರು. ಈಗ ಕತ್ತರಿ ನಿರ್ಣಯ ತಂದಿರತಕ್ಕ ಶ್ರೀ ಮಾದಯ್ಯಗೌಡರ ಉದ್ದೇಶವೇನೆಂದರೆ, ಈ ರೆವಿನ್ಯೂ ಬಾಬಿನಲ್ಲಿ ಆಗತಕ್ಕ ಖರ್ಚು ಸರಿಯಾಗಿ ಆಗುತ್ತಿದೆಯೇ, ಅದಕ್ಕೆ ಏನಾದರೂ ಸರಿಯಾದ ಒಂದು ಪ್ಲಾನ್ ಇದೆಯೋ ಮತ್ತು ಎಲ್ಲಾ ಕಡೆಗೂ ಕೂಡ ಯಾವರೀತಿ ಹಂಚಿಕೆಯಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನರ್ವೆಸಾಧಾರಣವಾಗಿ ಕೇಳಿದ್ದಾರೆ.

ನಾನು ಹೇಳುವುದೇನೆಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಈ ಖರ್ಚು ಬಹಳ ಅವಶ್ಯಕವಾಗಿತ್ತು. ಕೃಷ್ಣರಾಜನಗರ ತಾಲ್ಲೂಕಿನಿಂದ ಇದೇ ಅಭಿವೃದ್ಧಿ ಕಾರ್ಯಗಳ ಸಂಬಂಧದಲ್ಲಿ ಕಳೆದ 49ನೆಯ ಇಸವಿಯಲ್ಲಿ ಒಂದು ದೊಡ್ಡ ಫಿರ್ಯಾದೇ ಬಂತು. "ಆಹಾರ ಹೆಚ್ಚಿಗೆ ಬೆಳೆಯಿರಿ, ಬೆಳೆಯಿರಿ ಎಂದು ಸರ್ಕಾರದವರು ಹೇಳುತ್ತಿರುತ್ತಾರೆ; ಬೇಕಾದಷ್ಟು ಗೊಬ್ಬರ, ಬೀಜ, ಇತರೇ ಸಾಮಾನುಗಳನ್ನು ಕೊಡುತ್ತೇವೆನ್ನುತ್ತಾರೆ; ಆದರೆ, ಏನುಕೊಟ್ಟರೇನು ನೀರಿಲ್ಲದೆ ಇದ್ದರೆ" ಎಂದು ಹೇಳಿ ಕೆಲವು ನಾರೆಗಳನ್ನು ಖುದ್ದಾಗಿ ತೋರಿಸಿ ಅಲ್ಲಿ ನಾರಾದುರಸ್ತಾಗದೆ ಹೋಗಿ, ನೀರು ಮುಂದೆ ಹೋಗದೆ ನುಮಾರು 2,000 ಎಕರೆಗಳು ಖಾಲ ಬಿದ್ದಿರುವುದನ್ನು ತೋರಿಸಿದರು. ಅದನ್ನು ಸರಿಪಡಿಸಿಕೊಟ್ಟರೆ 10,000 ಪಲ್ಲಗಳಷ್ಟು ಬೆಳೆಯಬಹುದೆಂದು ತಿಳಿಸಿದರು. ಮಾನ್ಯ ಮಂತ್ರಿಗಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಿದರು. ಅದೇ ಪ್ರಕಾರ ಕೃಷ್ಣರಾಜನಗರದ ನಾರಾಗಳಿಗೆಲ್ಲಾ ಸತ್ತೆ ಕಾಮಗಾರಿ ಮಾಡಿಸುವ ಏರ್ಪಾಡು ಮಾಡಿ ಈ 2,000 ಎಕರೆಗಳಿಗೂ ಯಥೇಷ್ಟವಾಗಿ ನಿರಾತಂಕವಾಗಿ ನೀರು ಹೋಗುವಂತೆಮಾಡಿಕೊಟ್ಟರು. ಅದೇರೀತಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಎಣ್ಣೆ ಹೊಳೆಯೆಂದು ಒಂದು ಸಣ್ಣ ಹೊಳೆ ಹರಿಯುತ್ತಿತ್ತು. ಬಹಳ ದಿವಸಗಳಿಂದ ಅದರಿಂದೇನು ಅನುಕೂಲವಾಗುತ್ತದೆಂದು ಗೊತ್ತಿರಲಿಲ್ಲ. ಅದನ್ನೂ ಸಹ ಪರೀಕ್ಷೆಮಾಡಿಸಿ ಒಂದು ಸಣ್ಣ ಅಣೆಕಟ್ಟು ಹಾಕಿಸಿಕೊಟ್ಟ್ದಕ್ಕೆ 125 ಎಕರೆಗಳು ತೀರ್ ಆಬಾದಿಗೆ ಬಂದವು. ಹಾಗೆಯೇ ಚಾಮರಾಜನಗರದ ಸುವರ್ಣಾವತಿ ನದಿಯ ಕೆಳಗೆ 14 ಸಣ್ಣಸಣ್ಣ ಛಾನರ್‌ಗಳ ದುರಸ್ತಿಯಾಗಿವೆ. ಇಪ್ಪೆಲ್ಲ ಕ್ಕಿಂತ ಹೆಚ್ಚಿನದು ಯಳಂದೂರಿನದು. ಅಲ್ಲಿ ನೀರು ಯಥೇಚ್ಛವಾಗಿದೆ. ಆದರೆ ಕಾಲುವೆಗಳು ಹೂತು ಹೋಗಿ ಕಡೆ ಜಮೀನುಗಳಿಗೊಂದಕ್ಕೂ ನೀರೇ ಹತ್ತುತ್ತಿರಲಿಲ್ಲ. ಹಿಂದೆ ಪೂರ್ಣಯ್ಯನವರಿದ್ದಾಗ ಅವರು ಖುದ್ದು ನಿಗಾ ಕೊಟ್ಟು ಕಾಮಗಾರಿ ಮಾಡಿಸುತ್ತಿದ್ದರು. ಅಂಥಾದ್ದನ್ನು ಈಗ ನೋಡುವವರೇ ಇರಲಿಲ್ಲ. ಅದನ್ನು ಈಗ ಮುತುವರ್ಜಿಯಿಂದ ಕಾಮಗಾರಿ ಮಾಡಿಸಿದ್ದರಿಂದ ಒಂದು ಬಾರಿ ಮಳೆ ಬಂದು ಕೂಡ್ಲೆ ಒಂದೇನಲ ಕೆರೆಗಳು ತುಂಬಿದಾಗ ಅಲ್ಲಿನ ಜನರ ಸಂತೋಷ ಅಷ್ಟಿಷ್ಟಲ್ಲ.....

ಶ್ರೀ ಎಲ್. ಸಿದ್ದಪ್ಪನವರು.—ಅಧ್ಯಕ್ಷರೇ, ಒಂದು ವಿಷಯ. ಉಪಹಾರದ ನಂತರ ನಾವುಗಳಾರೂ ಇಲ್ಲಿ ಇರುವುದಕ್ಕಾಗುವುದಿಲ್ಲ. ದಯವಿಟ್ಟು ಈಗ ನಮ್ಮ ಮುಂದಿರುವ ಜೋತಾ ಸೂಚನೆಗಳನ್ನು ನಾಳೆ ತೆಗೆದು ಕೊಳ್ಳುವುದಕ್ಕೆ ಅವಕಾಶ ಮಾಡಬೇಕೆಂದು ಪ್ರಾರ್ಥನೆ.

**The Hon'ble Sri K. CHENGALARAYA REDDY** (Leader of the House.)—We have no objection to take them up tomorrow.

**Mr. SPEAKER.**—So, shall we adjourn after this cut motion is disposed of, till tomorrow? Tomorrow shall we take up Legislative Business or cut motions?

**The Hon'ble Sri K. CHENGALARAYA REDDY.**—Tomorrow legislative

(THE HON'BLE SRI K. CHENGALARAYA REDDY).

business may be taken up if we are adjourning to-day and the financial business can be taken up on another day which we will have to fix up.

**Janab SYED ABDUR RAHMAN** (Chikmagalur *cum* Shimoga—Muslim).—As it is, only one cut motion has been discussed.

**The Hon'ble Sri K. CHENGALARAYA REDDY.**—If the Hon'ble Speaker decides that the financial business that is left over to-day may be taken up tomorrow, we have no objection either.

**Mr. SPEAKER.**—I have no objection to take it up tomorrow.

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ಯಳಂದೂರು ತಾಲ್ಲೂಕಿನಲ್ಲಿ ಒಂದೇ ಕಾಲದಲ್ಲಿ 70–80 ಸಾವಿರ ರೂಪಾಯಿಗಳ ಮೇಲೆ ಖರ್ಚುಮಾಡಿ ಇಷ್ಟು ಮಾಡಿಸಿಕೊಟ್ಟಿದ್ದರಿಂದ ಇಂದು ಆ ಜನರಿಗೆ ಬಹಳ ಉಪಯೋಗವಾಗಿದೆ. ಹಾಗಿಲ್ಲದೆ ಇಂದು ಸ್ವಲ್ಪ ಒಂದು ಕಡೆಯಲ್ಲಿ ಇನ್ನೊಂದು ಸಲ ಇನ್ನೊಂದು ಕಡೆಯಲ್ಲಿ ಸ್ವಲ್ಪ ಎಂದು ಕಾಮಗಾರಿ ಮಾಡಿದ್ದರೆ ಏನೂ ಪ್ರಯೋಜನ ಆಗುತ್ತಿರಲಿಲ್ಲ. ಈ ರೀತಿಯಾಗಿ 1,84,000 ರೂಪಾಯಿಗಳನ್ನು ಖರ್ಚುಮಾಡಿ ಅಲ್ಲಿನ ತೊಂದರೆಗಳನ್ನೆಲ್ಲಾ ತಪ್ಪಿಸಿದ್ದಾರೆ. ಇಷ್ಟೆಲ್ಲಾ ಮಾಡಿದ್ದು ಅವರಿಗೆ ಮಾಡಿದ ಒಂದು ಸ್ಪೆಷಲ್ favour ಅಲ್ಲ. ಅದನ್ನೆಲ್ಲಾ ಮಾಡದೆ ಹೋದರೆ ಆಹಾರವನ್ನು ಹೆಚ್ಚಿಗೆ ಬೆಳೆಸುವುದಕ್ಕೆ ಬಹಳ ಕಷ್ಟವಾಗುತ್ತಿತ್ತು. ನೀರಾವರಿ ಕಾಮಗಾರಿಗಳ ದುರಸ್ತಿಮಾಡಬೇಕಾದ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಅವಶ್ಯಕತೆ ಬಹಳ ವಾಗಿತ್ತೆಂಬುದರಲ್ಲಿ ಅನುಮಾನವಿಲ್ಲ. ಈ ನಿರ್ಣಯದ ಸೂಚಕರೂ ಇದೇ ರೀತಿ ಬಾಕಿ ಕಡೆಯಲ್ಲೂ ನಿಗಾ ಕೊಡಿ ಎಂದು ಹೇಳಿರುವುದೂ ಸಾಧುವಾಗಿದೆ. ಅಲ್ಲದೆ ಸರ್ಕಾರದವರ ಅಭಿಪ್ರಾಯವೇನು, ಅವರೇನಾದರೂ ಒಂದು ಯೋಜನೆಯನ್ನಿಟ್ಟುಕೊಂಡಿದ್ದಾರೆಯೇ ಎಂಬ ದನ್ನು ತಿಳಿದುಕೊಳ್ಳುವುದು ಪಾಡಿಕೆಯಾಗಿದೆ. ಸರ್ಕಾರದವರ ಅಭಿಪ್ರಾಯದಲ್ಲೂ ಬೇರೆ ಕಡೆಗೆ ನಿಗಾ ಕೊಡ ಕೂಡದೆಂಬುದೇನೂ ಇಲ್ಲ. ಆದ್ದರಿಂದ ಇಷ್ಟು ಹೇಳಿ ನಾನು ಈ ಖೊತಾ ಸೂಚನೆಯನ್ನುವಿರೋಧಿಸುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ, ಶ್ರೀ ಮಾದಯ್ಯಗಾರವರು ತಂದಿರ ತಕ್ಕ ಈ ಖೊತಾ ನಿರ್ಣಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಭಾರತ ಸರ್ಕಾರದಿಂದ ಬರಬಹುದಾದ ಸಹಾಯವನ್ನು ಸಂಪೂರ್ಣವಾಗಿ ಉಪಯೋಗಿಸಬೇಕಾದ್ದು ಅವಶ್ಯಕ. ಆಹಾರದ ಉತ್ಪನ್ನವನ್ನು ಹೆಚ್ಚುಮಾಡುವುದಕ್ಕಾಗಿ ದೇಶಾದ್ಯಂತವೂ ಎಲ್ಲೆಲ್ಲಿ ಅವಶ್ಯಕವೋ ಅಲ್ಲೆಲ್ಲಾ ಹೆಚ್ಚಿನ ಪ್ರಮಾಣದಲ್ಲಿ ನೂಕ್ಕ ಕೆಲಸ ಕಾರ್ಯಗಳನ್ನು ಕೈಕೊಳ್ಳಬೇಕು. ಈ ನಿರ್ಣಯದ ಉದ್ದೇಶ ಒಳ್ಳೆಯದೇ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಸರ್ಕಾರದವರು ಆಹಾರದ ಉತ್ಪಾದನೆಯನ್ನು ಹೆಚ್ಚು ಮಾಡಬೇಕೆಂಬ ತಮ್ಮ ಉದ್ದೇಶದಲ್ಲಿ ಸಫಲ ಹೊಂದಬೇಕಾದರೆ ಮರೆನಾಡಿನ ಪ್ರಾಂತ್ಯದಲ್ಲಿ ಹೆಚ್ಚು ಹೆಚ್ಚಿನ ನೀರಾವರಿ ಕಾಮಗಾರಿಗಳನ್ನು ಕೈಕೊಳ್ಳಬೇಕೆಂಬುದು ಎಲ್ಲರೂ ಒಪ್ಪತಕ್ಕ ವಿಚಾರ. ಪಿರಿಯಾಪಟ್ಟಣ, ಹುಣಸೂರು ಹೆಗ್ಗಡದೇವನಕೋಟೆ ಈ ಮೂರು ತಾಲ್ಲೂಕುಗಳಲ್ಲಿ ಎಷ್ಟು ಹಣ ಖರ್ಚು ಮಾಡಿದರೂ ಅಷ್ಟು ಪ್ರಯೋಜನ ವಿದೆಯೆಂದು ನಾನು ಒತ್ತಾಯಪೂರ್ವಕವಾಗಿ ಮಾನ್ಯ ಸಚಿವರಲ್ಲಿ ನಿವೇದನ ಮಾಡುತ್ತೇನೆ. ಈಗಾಗಲೇ ಈ ಸಂಬಂಧದಲ್ಲಿ ಎಷ್ಟೋ ಕೆಲಸ ಆಗಿದೆ. ಇನ್ನೂ ಆಗತಕ್ಕದ್ದಿದೆ. ಯಳಂದೂರ್ ತಾಲ್ಲೂಕಿನ ವಿಷಯದಲ್ಲಿ ನಿಮಗೆ ಒತ್ತಾಯ ಪದೇ ಪದೇ ಬರುತ್ತಲೇ ಇದೆ. ಅಲ್ಲಿನ ಎಷ್ಟೋ ಕೆರೆಗಳಿಗೆ ಕಾಂಗಾರಿಯ ಸೌಲಭ್ಯ ಸಿಗಬೇಕಾಗಿದೆ. ದೇಶಾದ್ಯಂತ ಈ ಬಗೆಯ ಕೆಲಸಗಳಿಗೆ ಈ ವರ್ಷ 50 ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ನ್ಯಾಯವೆಂದಿದೆ. ಈ ವರ್ಷವೇ ಈ ಕಾರ್ಯ ಕೈಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ. ಇದರಿಂದ ಸಾವಿರಾರು ಎಕರೆಗಳು ಸಾಗುವಳಿಗೆ ಬರುವ ಅವಕಾಶವಿರುವುದರಿಂದ ಮಾನ್ಯ ಸಚಿವರು ಈ ಕೆಲಸವನ್ನು ಕೈಕೊಳ್ಳುವ ಭರವಸೆ ನೀಡುವರೆಂದು ನಂಬಿದ್ದೇನೆ.

ಶ್ರೀ ಎ. ಸುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ನೀರಾವರೀ ಕಾಮಗಾರಿಗಳ ವಿಷಯದಲ್ಲಿ ಸರ್ಕಾರದವರು ಕೆರೆ ದುರಸ್ತಿಗಳೇ ಮುಂತಾಗಿ ಹೆಚ್ಚಿನ ಕೆಲಸಗಳನ್ನು ಸಾಮಾನ್ಯವಾಗಿ ಮಾಡುತ್ತಲಿದ್ದಾರೆ. ಆದರೆ ಕೋಲಾರ ಜಿಲ್ಲೆಯ ಪರಿಸ್ಥಿತಿಯನ್ನು ನೋಡುವುದಾದರೆ ಅಲ್ಲ ಮಳೆಯ ಅಭಾವ ಬಹಳವಾಗಿರುವುದರಿಂದ 6 ವರ್ಷಕ್ಕೊಮ್ಮೆ ಕ್ಷೀಯೇನಾದರೂ ಕೆರೆಗಳು ತುಂಬಿದರೆ ತುಂಬಬಹುದು. ಅಂಥಾದ್ದರಲ್ಲಿ ಕೆರೆಗಳೂ ಸರಿಯಾಗಿ ದುರಸ್ತಾಗಿಲ್ಲದಿದ್ದರೆ ಮಳೆ ಬಂದು ಅಲ್ಪ ಸ್ವಲ್ಪ ನೀರು ಬಂದರೂ ಪೂರ್ತಿ ಸಾಗುವಾಡುವುದಕ್ಕಾಗದೆ ಹೈರುಗಳು ಒತ್ತಿ ಹೋಗುತ್ತವೆ. ಒಟ್ಟಿನಲ್ಲಿ ನೀರಾವರಿ ಕೆಲಸಗಳು ತಕ್ಕಮಟ್ಟಿಗೆ ಸಂಸ್ಥಾನಾದ್ಯಂತ ಮುಂದುವರಿಯುತ್ತಿದ್ದರೂ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಹೆಚ್ಚಿಗೆ ಕೆರೆಗಳಿರುವುದರಿಂದ ಅಲ್ಲಿಗೆ ಹೆಚ್ಚಿನ ಗಮನ ಕೊಟ್ಟು ದುರಸ್ತಿಮಾಡಿಸುವುದು ಸರ್ಕಾರದ ವರ ಕರ್ತವ್ಯ. ಅದಕ್ಕಾಗಿ ಜಾಗ್ರತೆ ಹೆಚ್ಚಿಗೆ allotment ಮಾಡಬೇಕೆಂದು ಹೇಳುತ್ತೇನೆ.

ಈ ಸಂದರ್ಭದಲ್ಲಿ ಬಾಗೆಪಳ್ಳಿ ತಾಲ್ಲೂಕಿನಲ್ಲಿರುವ ಚಿತ್ರಾವತಿ ನದಿಯ ವಿಷಯ ಸ್ವಲ್ಪಹೇಳಬಯಸುತ್ತೇನೆ. ಅದರಿಂದ ಹಿಂದೆ ಹೆಚ್ಚಿನ ಉಪಯೋಗ ಪಡೆಯುತ್ತಿದ್ದೆವು. ಅಲ್ಲ ತಿರುಮಣ ಅಣೆಕಟ್ಟೆಂಬುದು ಇದ್ದು 5–7 ಕೆರೆಗಳಿಗೆ ಸಮೃದ್ಧಿಯಾಗಿ ನೀರು ಒದಗುತ್ತಿತ್ತು. ಅಂಥಾದ್ದೀಗ ಎಲ್ಲಾ ಬತ್ತಿಹೋಗಿದೆ. ಇದರಿಂದ ಸುಮಾರು 700—1,000 ಎಕರೆಗಳಷ್ಟು ಪ್ರದೇಶ ಸಾಗಿಗೆ ಬರುತ್ತಿದ್ದುಂಥಾದ್ದು ಈಗ ಪಾಳಾಗಿದೆ. ಹಿಂದೆ ಇದರಿಂದ ಕೆಲವು ಖಾಪ್ತಿ ಜಮೀನುಗಳನ್ನೂ ಸಾಗು ಮಾಡಬಹುದೆಂದು ಹೇಳಿತ್ತಿದ್ದರು. ಆದ್ದರಿಂದ ಈ ಕೆಲಸವನ್ನು ಆದಷ್ಟು ಬೇಗ ಕೈಕೊಳ್ಳಬೇಕೆಂದು ಅನೇಕ ದಿವಸಗಳಿಂದ ನಾವು ಸರ್ಕಾರದವರನ್ನು ಪ್ರಾರ್ಥಿಸುತ್ತಿದ್ದೇವೆ. ಅದರಲ್ಲೂ ಈಗಿನ ಆಹಾರಾಭಾವದ ಕಾಲದಲ್ಲಿ ಇದಕ್ಕೆ ಮುಂಚಿನ priority ಕೊಟ್ಟು ಕೆಲಸವನ್ನು ಕೈಕೊಂಡರೆ ಸುಮಾರು 1,500 ಎಕರೆಗಳ ವಿಸ್ತೀರ್ಣದ ಜಮೀನುಗಳು ಬಂದು ನಮಗಿರುವ ಆಹಾರದ ಕೊರತೆಯನ್ನು ನಿವಾರಣೆಮಾಡುವುದಕ್ಕೆ ಸಹಾಯಕವಾಗುತ್ತದೆ. ಆದ್ದರಿಂದ ಈ ಕೆಲಸವನ್ನು ಮಾಡಿಸಿ ಕೊಟ್ಟು ನಮ್ಮ ರೈತರಿಗೆ ಅನುಕೂಲ ಮಾಡಬೇಕೆಂದು ಹೇಳಿ ಈ ಖೊತಾ ಸೂಚನೆ

ಯನ್ನು ಒತ್ತಾಯಪಡಿಸಬೇಕಾಗಿಲ್ಲವೆಂದು ಸೂಚಿಸುತ್ತೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸ್ಪೀಕರ್, ಮಾನ್ಯ ಸದಸ್ಯರು ಕೆಲವು ಬಹಳ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ನೀರಾವರಿ ಕಾಮಗಾರಿಗಳಿಗೆ ಹಣ ಕೊಡುವಾಗ ಎಲ್ಲಾ ಡಿಸ್ಟ್ರಿಕ್ಟುಗಳಿಗೂ ಸಮವಾಗಿ ಕೊಡುವುದು ಕಷ್ಟವೆಂಬುದನ್ನು ಶ್ರೀ ಸಿದ್ದಪ್ಪನವರೇ ಒಪ್ಪಿಕೊಂಡಿದ್ದಾರೆ. ಶ್ರೀ ಮಾದಯ್ಯ ಗೌಡರು ತಂದಿರತಕ್ಕ ಖೋತಾ ನಿರ್ಣಯದ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಹಣವನ್ನು ಸಾಧ್ಯವಾದಷ್ಟು ಎಲ್ಲ ಡಿಸ್ಟ್ರಿಕ್ಟುಗಳಿಗೂ ಕೊಡಬೇಕೆಂಬುದನ್ನು ಒಪ್ಪುತ್ತೇವೆ. ಆದರೆ ನೀರಾವರಿ ಕಾಮಗಾರಿಗಳಲ್ಲಿ ಒಂದು ವೈಶಿಷ್ಟ್ಯವಿದೆ. ಎಲ್ಲೆಲ್ಲಿ ಸಾಧ್ಯವೆಂದು ಪರಿಣತರು ತಿಳಿಸುತ್ತಾರೋ ಅಲ್ಲಿ ಈ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲದೆ ಹೆಚ್ಚು ಆಹಾರ ಬೆಳೆಯುವ ಯೋಜನೆಯಲ್ಲಿ ಬರತಕ್ಕ ಕಾಮಗಾರಿಗಳನ್ನು ನಾವೇ ಸ್ವತಂತ್ರವಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಕೇಂದ್ರ ಸರ್ಕಾರದವರಿಗೆ ಅಂಕಿ ಅಂಶಗಳನ್ನು ಕೊಟ್ಟು ಅವರು ಅದನ್ನು ಪರಿಶೀಲಿಸಿ ಒಪ್ಪಿದಲ್ಲಿ ಕೆಲವಕ್ಕೆ ಸೇಕಡ 50ರಷ್ಟು ಹಣವನ್ನೂ ಇನ್ನೂ ಕೆಲವಕ್ಕೆ ಸೇಕಡ 25 ಭಾಗ ಹಣವನ್ನೂ ಅವರು ಕೊಡುತ್ತಾರೆ. ಆದುದರಿಂದ ಅವರು ಒಪ್ಪಬೇಕಾದರೆ ಯೋಜನೆಗಳ ವಿವರಗಳನ್ನು ಕಳುಹಿಸುವಾಗ ಯಾವ ಯಾವ ಕಾಮಗಾರಿಗಳನ್ನು ಬೇಗ ಮುಗಿಸಬಹುದು ಯಾವ ಯಾವುದರಿಂದ ಬೇಗ ಫಲ ಬರುತ್ತದೆಯೋ ಅಂತಹ ಕೆಲಸಗಳನ್ನು ಸೇರಿಸಿ ಪಟ್ಟಿಯನ್ನು ಕಳುಹಿಸಿದರೆ ಒಪ್ಪುತ್ತಾರೆ. ಅಲ್ಲದೆ ಸುಲಭ ಖರ್ಚಿನಲ್ಲಿ ತರೀ ಜಮೀನು ಮಾಡುವುದಕ್ಕೆ ಸಾಧ್ಯವಾದರೆ ಅಂತಹ ಸಂದರ್ಭದಲ್ಲೂ ಕೊಡುತ್ತಾರೆ. ಈ ಚೌಕಟ್ಟಿನೊಳಗೆ ನಾವು ಕೆಲಸಮಾಡಬೇಕು. ನಾವು ಒಂದು ಪ್ರೋಗ್ರಾಂ ತಯಾರುಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಅದು ಅವನ ಒಪ್ಪಿಗೆ ಪಡೆದರೆ ಅವರು ಗ್ರಾಂಟು ಕೊಡುತ್ತೇವೆಂದು ಹೇಳಿದ್ದಾರೆ, ಆ ಕಾರ್ಯಕ್ರಮದ ವಿವರಗಳನ್ನು ಮುದ್ರಣಮಾಡಿಸಿ ಮಾನ್ಯ ಸದಸ್ಯರಿಗೆ ಹಂಚಿದ್ದೇವೆ. ಅದರಲ್ಲಿ 1949-50 ಮತ್ತು 1950-51ನೆಯ ಸಾಲುಗಳಿಗೆ ಕೇಂದ್ರ ಸರ್ಕಾರದವರು ಎಷ್ಟು ಹಣ ಕೊಟ್ಟಿದ್ದಾರೆಂಬುದನ್ನು ತಿಳಿಸಿದ್ದೇವೆ. ಆದಕಾರಣ ಈಗ 1951-52ನೆಯ ಸಾಲಿನ ನೀರಾವರಿ ಕಾಮಗಾರಿಗಳ ವಿಚಾರದಲ್ಲಿ ಮಾತ್ರ ಹೇಳುತ್ತೇನೆ. ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳಿಗೆ ಸಂಬಂಧಪಟ್ಟ ಒಂದು ಕಾರ್ಯಕ್ರಮದಪಟ್ಟಿ 24 ಲಕ್ಷ ರೂಪಾಯಿ ಖರ್ಚನ್ನೊಳಗೊಂಡದ್ದನ್ನು ಕಳುಹಿಸಿದ್ದೆವು. ಇವಕ್ಕೆ ನಾವು ನಮ್ಮ ಬಡ್ಜೆಟ್ಟಿನಲ್ಲಿ 12.5 ಲಕ್ಷ ರೂಪಾಯಿ ಒದಗಿಸಿದ್ದೆವು. ಕೇಂದ್ರ ಸರ್ಕಾರದವರು ಮಿಕ್ಕದ್ದನ್ನು ಗ್ರಾಂಟು ರೂಪದಲ್ಲಿ ಕೊಟ್ಟಿದ್ದಾರೆ.

ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡುವ ಕೆಲಸ. ಇದು ಮೈಸೂರು ದೇಶದ ಎಲ್ಲ ಜಿಲ್ಲೆಗಳಲ್ಲೂ ಇದೆ. ಅದರಲ್ಲಿಯೂ ಕೋಲಾರ, ಬೆಂಗಳೂರು, ತುಮಕೂರು ಮತ್ತು ಚಿತ್ರದುರ್ಗ ಈ ಜಿಲ್ಲೆಗಳಿಗೆ ಹೆಚ್ಚು ಗಮನ ಕೊಡುತ್ತೇವೆ. Desilting of tanksಗೆ 5 ಲಕ್ಷ ರೂಪಾಯಿ ಒದಗಿಸಿದ್ದೇವೆ. Lift Irrigationಗೂ ಇಂಡಿಯಾ ಸರ್ಕಾರದವರು ಸಹಾಯ ಒದಗಿಸಲು ಒಪ್ಪಿದ್ದಾರೆ. Land Improvement Schemes ಈಗ ಚರ್ಚೆಯಲ್ಲಿಲ್ಲ. ನಾವು 12 ಲಕ್ಷ ರೂಪಾಯಿನ ಯೋಜನೆಮಾಡಿ ಕಳುಹಿಸಿದ್ದೆವು. ಅದಕ್ಕೆ ನಾವು 6 ಲಕ್ಷ ರೂಪಾಯಿ ಒದಗಿಸಿದ್ದೇವೆ. ಅವರು 6 ಲಕ್ಷ ಕೊಟ್ಟಿದ್ದಾರೆ. ಇದರಲ್ಲಿ 'ಪಿಕ್‌ಅಪ್ಸ್' ಕೆಲಸಗಳು ಕೂಡ ಇವೆ. ಈ ಪಿಕ್‌ಅಪ್ಸ್ ಮಾಡಬೇಕಾದರೆ ಸರಿಯಾದ ಜಾಗವನ್ನು ನೋಡಿ ಮಾಡಬೇಕು. ಎಲ್ಲಿ ನೀರು ಹರಿಯುತ್ತಿದೆಯೋ ಎಲ್ಲಿ ವಿಶಾಲವಾದ ಪ್ರದೇಶದ ಮೇಲೆ ಬೀಳುವ ನೀರು ಸೇರಿ ಹರಿದುಬರುವುದಕ್ಕೆ ಅವಕಾಶವಿರುತ್ತದೆಯೋ ಅಂತಹ ಸ್ಥಳಗಳನ್ನು ನೋಡಿ ಅಲ್ಲಿ ಅಣೆಗಳನ್ನು ಕಟ್ಟುವ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಇಂತಹ ಕೆಲಸಗಳಿಗೆ ಮೈಸೂರು ಮತ್ತು ಮಂಡ್ಯ ಡಿಸ್ಟ್ರಿಕ್ಟುಗಳಲ್ಲಿ ಹೆಚ್ಚು ಅವಕಾಶವಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ವಾಣಿವಿಲಾಸ ಸಾಗರದ ಪ್ರದೇಶದಲ್ಲಿ ಈಗಾಗಲೇ 13 ಪಿಕ್‌ಅಪ್ಸ್ ಹಾಕಿದ್ದೇವೆ, ಇನ್ನೂ ಎಂಟುಹತ್ತನ್ನು ಹಾಕಬೇಕೆಂಬ ಉದ್ದೇಶವಿದೆ. ಈ ಪ್ರಸಕ್ತ ಸಾಲಿನಲ್ಲಿ ನಮ್ಮ ಮುಂದಿರುವ ಗುರಿಯೇನೆಂದರೆ, ಕೆರೆಗಳನ್ನು ಕಟ್ಟುವುದು, ಪಿಕ್‌ಅಪ್ಸ್ ಕಟ್ಟುವುದು, ಫೀಡರ್ ಚಾನಲ್ಸ್ ಮಾಡುವುದು, ಹೊಳೆಯ ನಾರೆಗಳನ್ನು ಸರಿಪಡಿಸುವುದು, ಅಂದರೆ ಒಡೆದುಹೋಗಿದ್ದರೆ ಅಥವ ಹೂಳು ತುಂಬಿಕೊಂಡು ಜಮೀನುಗಳಿಗೆ ತೊಂದರೆಯಾಗಿದ್ದರೆ, ಕೆರೆಯ ನಾರೆಗಳು ಕೆಟ್ಟುಹೋಗಿದ್ದರೆ ಅವುಗಳನ್ನು ರಿಪೇರಿ ಮಾಡುವುದು, ಇಂಥವುಗಳಿಗೆ ಮೊದಲು ಗಮನಕೊಡಬೇಕು. ಏಕೆಂದರೆ ಇವುಗಳಿಂದ ಬೇಗ ಪ್ರತಿಫಲ ದೊರೆಯುತ್ತದೆ. ಶ್ರೀ ರಂಗರಾಮಯ್ಯನವರು ಚಾಮರಾಜನಗರ ಮತ್ತು ಯಳಂದೂರಿನ ವಿಷಯ ಹೇಳಿದರು. ಯಳಂದೂರು ತಾಲ್ಲೂಕಿನಲ್ಲಿ 50 ವರ್ಷದಿಂದ ಫೀಡರ್ ಚಾನಲ್‌ಗಳನ್ನು ರಿಪೇರಿ ಮಾಡಿರಲಿಲ್ಲ, ಅನೇಕ ಕೆರೆಗಳಿಗೆ ನೀರು ಬರುತ್ತಿರಲಿಲ್ಲ. ಆ ಪ್ರಾಂತದ ಜನರು ಸರ್ಕಾರದಲ್ಲಿ ಒತ್ತಾಯಮಾಡಿದ್ದಾರೆ, ಅದರ ಮೇಲೆ 1 ಲಕ್ಷ 20 ಸಾವಿರ ರೂಪಾಯಿಗಳ ಖರ್ಚಿನಲ್ಲಿ ಆರೇಳು ತಿಂಗಳೊಳಗೆ ಸುವರ್ಣಾವತಿ ಹೊಳೆಯಿಂದ ಎಲ್ಲ ಕೆರೆಗಳಿಗೂ ನೀರು ಬರುವಂತೆ ಮಾಡಿ ಆ ಕೆರೆಗಳನ್ನು ಅಭಿವೃದ್ಧಿ ಮಾಡಿದ್ದೇವೆ. ಒಂದೆರಡು ದಿನಗಳಲ್ಲೆ ಆ ಕೆರೆಗಳೆಲ್ಲ ತುಂಬುವಂತೆ ಮಾಡಿದೆವು. ಈ ವರ್ಷ ಎಲ್ಲ ಕೆರೆಗಳೂ ತುಂಬಿವೆ, ರೈತರು ಸಂತೋಷದಿಂದಿದ್ದಾರೆ, ಕೂಡಲೇ ಬತ್ತವನ್ನು ಬೆಳೆಯಬಹುದು. ಇದೇರೀತಿ ಮೈಸೂರು ಮಂಡ್ಯ ಜಿಲ್ಲೆಗಳಲ್ಲದೆ ಶಿವಮೊಗ್ಗ ಜಿಲ್ಲೆಯಲ್ಲಿಯೂ ಹೇರಳವಾಗಿ ಹಣವನ್ನು ಖರ್ಚು ಮಾಡಿದ್ದೇವೆ. ಆದಕ್ಕಾಗಿಯೇ ಶ್ರೀ ಸಿದ್ದಪ್ಪನವರು ಈ ವಿಷಯದಲ್ಲಿ ತೀವ್ರವಾಗಿ ಟೀಕೆ ಮಾಡಲಿಲ್ಲ. ಅವರು ಹಿಂದೆ ಪಬ್ಲಿಕ್ ವರ್ಕ್ಸ್ ಮಂತ್ರಿಗಳಾಗಿದ್ದವರು. ನಮಗೆ ಶಿವಮೊಗ್ಗ ಜಿಲ್ಲೆಯ ವಿಷಯದಲ್ಲಿ ಯಾವ ವಿಧವಾದ ಪಕ್ಷಪಾತವೂ ಇಲ್ಲ, ಬೇರೆ ಜಿಲ್ಲೆಗಳೆಂಬ ಪಕ್ಷಪಾತವೂ ಇಲ್ಲ. ಶಿವಮೊಗ್ಗ ಜಿಲ್ಲೆಯವರು ನಮಗೆ ಹೆಚ್ಚು ಬತ್ತವನ್ನು ಕೊಡುತ್ತಿದ್ದಾರೆ. ಸುಮಾರು ಆರೇಳು ಲಕ್ಷ ಪಲ್ಲ ಬತ್ತವನ್ನು ಕೊಡತಕ್ಕ ಮೈಸೂರು ದೇಶದ ಬತ್ತದ ಕಣಜ. ಸೊರಬ, ಶಿಕಾರಿಪುರ ಈ ಎರಡು ತಾಲ್ಲೂಕುಗಳಿಂದಲೇ ಮೂರು ಮೂರುವರೆ ಲಕ್ಷ ಬರುತ್ತದೆ. ಆದುದರಿಂದ ಅಂತಹ ಸ್ಥಳಗಳಲ್ಲಿ ನಾವು ಹಣ ಖರ್ಚುಮಾಡಿದರೆ ಬೇಗ ಪ್ರತಿಫಲ ಬರುತ್ತದೆ. ಈ ವರ್ಷ ಮಾಡಿದರೆ ಮುಂದಿನ ವರ್ಷವೇ ಫಲಬರುತ್ತದೆ. ನನಗೆ ಜ್ಞಾಪಕವಿರುವ ಹಾಗೆ ಸೀಗೆಹಳ್ಳದ ಅಣೆಯಿಂದ ಸುಮಾರು 24 ಕೆರೆಗಳಿಗೆ ನೀರು ಬಂದು ತುಂಬುತ್ತದೆ. ಒಂದು ವ್ಯಾಲಯವನ್ನೂ ಇನ್ನೊಂದು ರಿಡ್ಜನ್ನೂ cut ಮಾಡಿದರೆ 24 ಕೆರೆಗಳಿಗೆ ನೀರುಬಂದು ತುಂಬುತ್ತದೆ. ಹೀಗೆ ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ಕೆಲಸಗಳನ್ನು ಮಾಡಿದ್ದೇವೆ. ಹೋದವರ್ಷ, ಸೂಳೆ

(ಮಾನ್ಯ ಶ್ರೀ ಟಿ. ಮರಿಯಪ್ಪನವರು).

ಕೆರೆಯು ಹಿಂದೆ ಪ್ರಾಯಶಃ ನಾಯಕರ ಪಾಳೆಯಗಾರ ತನದ ಕಾಲದಿಂದ ರಿಪೇರಿಯಾಗಿರಲಿಲ್ಲ. ಬಚ್ಚಲಲ್ಲಿ ಮಣ್ಣು ಕೂಡ ತೆಗೆದಿರಲಿಲ್ಲ. ವಿಪರೀತ ಜೊಂಡು ಬೆಳೆದಿತ್ತು. ಇದರಿಂದ 2,500 ಎಕರೆ ವ್ಯವಸಾಯವಾಗದೆ ಕೈಬಿಟ್ಟುಹೋಗಿತ್ತು. ಇದರಿಂದ ಆ ಪ್ರದೇಶ ಮರೇ ರಿಯದ ತವರೂರಾಗಿತ್ತು. ಇಂತಹ ಪ್ರದೇಶವನ್ನು ಇಂಜಿನಿಯರುಗಳು ನೋಡಿ ಪರೀಕ್ಷೆಮಾಡಿ ಇದನ್ನು breach ಮಾಡಿದರೆ ರಿಪೇರಿ ಮಾಡುವುದಕ್ಕೆ ಸಾಧ್ಯ ಎಂದು ಹೇಳಿದ್ದರು. ಈಚೆಗೆ ನಮ್ಮ ಚೀಫ್ ಇಂಜಿನಿಯರಾಗಿದ್ದ ಶ್ರೀ ಬಿ. ಎಸ್. ನರಸಿಂಗರಾಯರು ಮತ್ತು ಶ್ರೀ ನಂಪತ್ತೆಯ್ಯಂಗಾರ್ಯರು ಸರಿಯಾಗಿ ಪರೀಕ್ಷೆ ಮಾಡಿನೋಡಿ ಆ ಪ್ರದೇಶವನ್ನು drain ಮಾಡಿದ್ದಾರೆ. ಡೈನಮೈಟ್ ಹಾಕಿ ಎಲ್ಲವನ್ನೂ ಸರಿಮಾಡಿಸಿದ್ದಾರೆ. ಈಗ 2,500 ಎಕರೆ ಫಲವತ್ತಾದ ಜಮೀನು ವ್ಯವಸಾಯಕ್ಕೆ ಬಂದಿದೆ. ಸೂಳೆ ಕೆರೆಯ ಏರಿಯಮೇಲೆ ನಿಂತು ನೋಡಿದರೆ, ಹಿಂದೆ ಜೊಂಡು ಬೆಳೆದುಕೊಂಡಿದ್ದ ಆ ಪ್ರದೇಶ ಈಗ ಒಳ್ಳೆಯ ವ್ಯವಸಾಯವಾಗಿ ಸೊಗಸಾಗಿ ಕಾಣುತ್ತದೆ. ಈಗಾಗಲೇ ಅನೇಕ ರೈತರು ಅಲ್ಲಿ ಜಮೀನು ಕೊಡಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಈ ಜಮೀನನ್ನೂ ಹೇರಳವಾದ ಬೆಲೆಗೆ ಕೊಡುವುದಕ್ಕವಕಾಶವಾಗಿದೆ. ಮೂರೂವರೆ ಲಕ್ಷದಲ್ಲಿ ಒಂದೂವರೆ ಲಕ್ಷ ರೂಪಾಯಿ ಶಿವಮೊಗ್ಗ ಜಿಲ್ಲೆಯಲ್ಲಿ ಈ ಸೂಳೆ ಕೆರೆಗೆ ಖರ್ಚಾಗಿದೆ. ಅಗರಹಳ್ಳಿ, ಭದ್ರಾ ಎಡಭಾಗದ ನಾಲೆ ಹಿಂದಿನವರ ಸರ್ಕಾರದ ಕಾಲದಲ್ಲಿ ಸರ್ವೆ ಆಗಿ ಹಾಗೆಯೇ ಬಿದ್ದಿತ್ತು. ಸುಮಾರು ಎಂಟು ತಿಂಗಳ ಕೆಳಗೆ, ಅಲ್ಲಿ ಅನೇಕ ವರ್ಷಗಳಿಂದ ಒಂದು ಅಣೆಇದ್ದು, ನಾಲೆ ಇರಲಿಲ್ಲ, ಅದನ್ನು ಮಾಡಿಸಿದ್ದೇವೆ. ರೈಟ್ ಬ್ಯಾಂಕ್ ಚಾನಲ್ ನೀರು ಹೋಗುತ್ತಿದ್ದಂತೆ ಲೆಫ್ಟ್ ಬ್ಯಾಂಕ್‌ನಲ್ಲಿಯೂ ಹೋಗುತ್ತಿದೆ. ಅದನ್ನೂ ಉಪಯೋಗ ಮಾಡಿಕೊಳ್ಳಬೇಕಾದುದು ಅವಶ್ಯಕ ಎಂದು ತಿಂಗಳ ಹಿಂದೆ ಒಂದು ನಾಲೆಯನ್ನು ತೆಗೆದು ಈ ವರ್ಷ ನೀರು ಕೂಡ ಕೊಟ್ಟಿದ್ದೇವೆ. ಆದುದರಿಂದ ಶಿವಮೊಗ್ಗ ಜಿಲ್ಲೆಗೆ ಕಡಿಮೆ ಮಾಡಿದ್ದೇವೆಂದರೆ ಒಪ್ಪುವುದಕ್ಕಾಗುವುದಿಲ್ಲ. 1951-52ಕ್ಕೆ ಕೂಡ ಹಾಗೆಯೇ ಹಣವನ್ನು ಹಂಚಿದ್ದೇವೆ. ದೊಡ್ಡ ಕೆರೆಗಳನ್ನು ಕಟ್ಟುವುದರಲ್ಲಿ, ಭಾರಿ ಕೆರೆಗಳಾದ ಸಂಗನಹಳ್ಳಿ, ಗಡಿಮಾಕುಂಟೆ, ತುಪ್ಪದಕಳ್ಳ ಮುಂತಾದವುಗಳಿವೆ. ಹಾಗೆಯೇ ನಲ್ಲಗುಡ್ಡ, ಕಣ್ಯ ಇಂತಹ 15 ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಸುಮಾರು 6 ಲಕ್ಷ ರೂಪಾಯಿನ ಕೆಲಸ ಮುಗಿದಿದೆ. ಇನ್ನೂ ಮೂರುಲಕ್ಷ ರೂಪಾಯಿ ಒದಗಿಸಿದ್ದೇವೆ. ಶಿವಮೊಗ್ಗ ಜಿಲ್ಲೆಗೆ 6 ಲಕ್ಷ 70 ಸಾವಿರ ರೂಪಾಯಿಗಳನ್ನು ಒದಗಿಸಿದ್ದೇವೆ. ಅಲ್ಲಿಯೂ ಭಾರಿ ಕೆರೆಗಳಿವೆ. ತುಂಗಭದ್ರಾ ಯೋಜನೆಗೆ 1 ಲಕ್ಷ 50 ಸಾವಿರ, 75 ಸಾವಿರ ಹಾಗೆ ಕೊಟ್ಟಿದ್ದೇವೆ.

ನೆಲ್ಲಗುಡ್ಡ ಮತ್ತು ಕಣ್ಯ ರಿನರ್ವ್ಯಾಯರುಗಳಿಗೆ ಒದಗಿಸಲಾಗಿದ್ದ ಮೊಬಲಗಿನಲ್ಲಿ ಎಲ್ಲಾ ಪೂರ್ತಿ ಖರ್ಚಾಗಿ ಇನ್ನು 3 ಲಕ್ಷ ಚಿಲ್ಲರೆಕೆಲಸ ಮಾತ್ರ ನಿಂತಿವೆ. ಹೀಗೆ ಲಫ್ಟ್ ಇರಿಗೇಷನ್, ರಿವರ್‌ವ್ಯಾಲಿಕರೆ ರಿಪೇರಿ ಇತ್ಯಾದಿಗಳಿಗೆಲ್ಲಾ ಹಣವನ್ನು ಯಥೇಷ್ಟವಾಗಿ ಒದಗಿಸುತ್ತಾ ಬಂದಿದ್ದೇವೆ. ಆದರೆ ಇನ್ನೂ ಅನೇಕ ವಿಷಯಗಳ ತಪಶೀಲನ್ನೆಲ್ಲಾ ಶೇಖರಿಸಿ ತಂದಿದ್ದೇನೆ. ಅವುಗಳು ಸದ್ಯಕ್ಕೆ ಅಪ್ರಕೃತ.

ಇನ್ನು ತುಮಕೂರು ಸರ್ಕಲ್‌ಗೆ ಈಬಗ್ಗೆ 3 ಲಕ್ಷ 35 ಸಾವಿರ ರೂಪಾಯಿಗಳನ್ನು ಒದಗಿಸಿರುತ್ತೇವೆ. ಈ ವಿಚಾರವನ್ನು ನಾನು ಮಾನ್ಯ ಸದಸ್ಯರುಗಳಾದ ಶ್ರೀ ಮಾದಯ್ಯಗೌಡರೂ ಮತ್ತು ಎಸ್. ಕರಿಯಪ್ಪನವರೂ ಎತ್ತಿದ ಆಕ್ಷೇಪಣೆಗಳ ಬಗ್ಗೆ ತಿಳಿಸಬೇಕಾಗಿ ಬಂದಿತು. ಹೀಗೆ ತುಮಕೂರು ಸರ್ಕಲ್ ಒಂದಕ್ಕೇ ಮೈನರ್ ಕೆರೆಗಳ ರೆಸ್ಟೋರೇಷನ್‌ಗಾಗಿ 6 ಲಕ್ಷ ಚಿಲ್ಲರೆ ರೂಪಾಯಿಗಳನ್ನೂ ಮತ್ತು ರಿವರ್ ಥಾನಲ್ಸ್, ಟ್ಯಾಂಕ್ ಥಾನಲ್ಸ್, ಅಣೆಕಟ್ಟುಗಳು ಮತ್ತು ಸಣ್ಣ ಸಣ್ಣ ಇತರೇ ಕಾಂಗಾರಿಗಳಿಗಾಗಿ 5 ಲಕ್ಷ 75 ಸಾವಿರ ಚಿಲ್ಲರೆ ಮೊಬಲಗನ್ನು ಒದಗಿಸಲಾಗಿದೆ.

ಇದೇರೀತಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಿಗೂ ಸಹ ಒಟ್ಟಾಗಿ ಒಂದು ಐಟಂಗೆ 3 ಲಕ್ಷ 55 ಸಾವಿರ ರೂಪಾಯಿಗಳನ್ನೂ ಮತ್ತೊಂದು ಐಟಂ ಕೆಲಸಕ್ಕಾಗಿ 10 ಲಕ್ಷ 92 ಸಾವಿರ ಚಿಲ್ಲರೆ ಮೊಬಲಗನ್ನೂ ಸಹ ಒದಗಿಸಲಾಗಿದೆ. ಇದರಲ್ಲಿ 50 ಸಾವಿರ ರೂಪಾಯಿಗಳ ಒಂದು ಐಟಂ ಸಹ ಸೇರಿದೆ. ಇಷ್ಟೇ ಅಲ್ಲದೆ ಇದೇರೀತಿ 3 ಲಕ್ಷ 55 ಸಾವಿರದ ಐಟಂ ಒಂದು, 1 ಲಕ್ಷ 27 ಸಾವಿರ ಚಿಲ್ಲರೆ ಐಟಂ ಒಂದು, 52 ಸಾವಿರದ ಐಟಂ ಒಂದು, 22 ಸಾವಿರದ ಐಟಂ ಒಂದು, 46 ಸಾವಿರದ ಐಟಂ ಒಂದು, ಒಂದು ಲಕ್ಷ ಚಿಲ್ಲರೆ ಮೊಬಲಗಿನ ಐಟಂ ಒಂದು, ಹೀಗೆ ಇಷ್ಟೊಂದು items of worksಗಳಿಗೆ ಇರಿಗೇಷನ್ ಬಾಬಿನಲ್ಲಿ river valleys, tank restoration ಮತ್ತು tank channels ಮತ್ತು feeder channels ಗಳಿಗೆ ಮಂಡ್ಯ ಮತ್ತು ಮದ್ದೂರು ಜಿಲ್ಲೆಗಳಲ್ಲಿ ಹಣವನ್ನು ಒದಗಿಸಿಕೊಟ್ಟಿದ್ದೇವೆ.

ತುಮಕೂರು ಸರ್ಕಲ್‌ನಲ್ಲಿ ಎಂದರೆ–ತುಮಕೂರು, ಬೆಂಗಳೂರು ಮತ್ತು ಕೋಲಾರ ಈ ಮೂರು ಜಿಲ್ಲೆಗಳೂ ಸೇರಿಕೊಂಡು ಒಂದು ಸರ್ಕಲ್ ಆಗಿದೆ. ಆದರೆ ಈ ಸರ್ಕಲ್‌ನಲ್ಲಿ river channels ಗಳು ಕಮ್ಮಿ. ಆದ ಕ್ಕೋಸ್ಕರವಾಗಿ ಈ ಬಾಬಿಗೆ ಕೇವಲ 13 ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಲಾಗಿದೆ. ಒಂದು ಐಟಂ ಕೆಲಸಕ್ಕೆ 1 ಲಕ್ಷ 95 ಸಾವಿರ ಚಿಲ್ಲರೆ ಮೊಬಲಗನ್ನೂ, ಮತ್ತೊಂದಕ್ಕೆ 1 ಲಕ್ಷ 78 ಸಾವಿರ ಚಿಲ್ಲರೆ ನಿಧಿಯನ್ನೂ, ಇನ್ನೊಂದು ಕಾಮಗಾರಿಗೆ 2 ಲಕ್ಷಚಿಲ್ಲರೆ ಮೊಬಲಗನ್ನೂ, 10 ಸಾವಿರ ಚಿಲ್ಲರೆ ಮೊಬಲಗನ್ನು ಮತ್ತೊಂದು ಕೆಲಸಕ್ಕೂ; 1 ಲಕ್ಷ 10 ಸಾವಿರ ರೂಪಾಯಿಗಳ ಮತ್ತೊಂದು ಕಾಮಗಾರಿಯನ್ನೂ, ಈ ಮೂರು ಜಿಲ್ಲೆಗಳಲ್ಲಿ ಕೈಗೊಂಡಿದ್ದೇವೆ.

ಇದೇ ರೀತಿ ಶಿವಮೊಗ್ಗ ಜಿಲ್ಲೆಗೂ ಸಹ ಹಣವನ್ನು ಒದಗಿಸಲಾಗಿದೆ. ಒಂದು ಕಾಮಗಾರಿಗೆ 30 ಸಾವಿರ ರೂಪಾಯಿಗಳನ್ನೂ ಮತ್ತೊಂದಕ್ಕೆ 1 ಲಕ್ಷ 88 ಸಾವಿರ ರೂಪಾಯಿಗಳನ್ನೂ ಮತ್ತು ಇನ್ನೊಂದು ಪ್ರಾಜೆಕ್ಟಿಗೆ 1 ಲಕ್ಷ 79 ಸಾವಿರ ರೂಪಾಯಿಗಳನ್ನೂ ಮತ್ತು feeder channels ಗಳಿಗಾಗಿ 1 ಲಕ್ಷ 34 ಸಾವಿರ ರೂಪಾಯಿಗಳನ್ನು ಒದಗಿಸಿದ್ದೇವೆ. ಇನ್ನು ಮಿನರೇಲಿಯಸ್ ಬಾಬಿನಲ್ಲಿ ಸಣ್ಣ ಸಣ್ಣ ಕಾಮಗಾರಿಗಳಿಗಾಗಿ 1 ಲಕ್ಷದ 80 ಸಾವಿರ ರೂಪಾಯಿಗಳನ್ನು ಒದಗಿಸ ರಾಗಿದೆ.

ಹೀಗೆ ಈ ಕೆಲಸಗಳ ಅಭಿವೃದ್ಧಿಗಾಗಿ ನಾವು ಒಂದು ಯೋಜನೆಯನ್ನೇ ಸಿದ್ಧಪಡಿಸಿಕ್ಕೊಂಡಿದ್ದೇವೆ. ಆ ಯೋಜನೆಗೆ ತಕ್ಕ ಹಾಗೆ ಸಂಸ್ಥಾನದ ನಾನಾ ಭಾಗಗಳಲ್ಲಿಯೂ ನಡೆಯುತ್ತಿರುವ ಕಾಂಗಾರಿಗಳು ಒಂದೇ ಮಟ್ಟದಲ್ಲಿ ಮುಂದುವರಿಯುವಂತೆ ನೋಡಿಕ್ಕೊಂಡು, ಅವುಗಳ ಸರ್ವೆ ಕೆಲಸ, ಪ್ಲಾನ್ ತಯಾರಿಸತಕ್ಕದ್ದು, ಅಂದಾಜು ಮಂಜೂರಾಗತಕ್ಕದ್ದು ಇತ್ಯಾದಿಗಳನ್ನೆಲ್ಲಾ ನೋಡಿಕ್ಕೊಂಡು, ಒಂದು Equitable distribution basis ಮೇಲೆ ಕೆಲಸಮಾಡುತ್ತಿ

ದ್ದೇವೆ. ಸಾಗೆ ಯಾವುದರಲ್ಲೂ ಪಕ್ಷಪಾತ ಭಾವನೆ ಮಾಡಲು ಅವಕಾಶವೇ ಇಲ್ಲ. ಆದರೆ ಎಲ್ಲೆಲ್ಲಿ river valley ಗಳಿವೆಯೋ ಅದಕ್ಕೆ ಅಲ್ಲಗೆ ಕೊಂಚ ಹೆಚ್ಚಿನ ಹಣವನ್ನೂ ಮತ್ತು ಎಲ್ಲೆಲ್ಲಿ tank valley ಗಳಿಗೆ ಅನುಕೂಲವಿರುತ್ತದೆಯೋ ಅಂಥಾ ಕಡೆಗಳಲ್ಲಿ ಅವುಗಳಿಗೂ ಮತ್ತು feeder channels ಗಳಿಗೆ ಎಲ್ಲೆಲ್ಲಿ ಹೆಚ್ಚಿನ ಅವಕಾಶವಿರುತ್ತೋ ಅದನ್ನು ನೋಡಿ ಕೊಂಡು, ಅದರ ಪ್ರಕಾರ ಅಲ್ಲಗೆ ಮೊಬಲಗನ್ನು ಒದಗಿಸಲಾಗಿದೆ. ಯಾವ ಒಂದು ಪ್ರದೇಶದಲ್ಲಿ river valley ಗಳ ಅನುಕೂಲತೆ ಹೆಚ್ಚಿಗೆ ಇಲ್ಲದೆ, ಒಂದೆರಡು ಇದ್ದ ಭಾಗದಲ್ಲಿ ಅಲ್ಲಗೆ ಒದಗಿಸುವ ಮೊಬಲಗೂ ಸಹ ಅಷ್ಟೇ ಕಡಿಮೆಯಾಗಿರುತ್ತದೆ. ಅಷ್ಟು ಶಿವಾಯಿ ಕಮ್ಮಿ ಮಾಡಲೇಬೇಕೆಂದು ಯಾರೂ ಮಾಡುವುದಿಲ್ಲ. ಈ ಅಂಶವನ್ನು ಮಾನ್ಯ ಸದಸ್ಯರು ಮುಖ್ಯವಾಗಿ ಗಮನಿಸ ಬೇಕು.

ಆದರೆ ಕಾನಕಾನಹಳ್ಳಿಯಲ್ಲಿ ಬಹಳ ಹಿಂದಿನಿಂದಲೂ ಈ ನೀರಾವರಿ ವಿಚಾರದಲ್ಲಿ ಬಹಳ ಉದಾಸೀನತೆಯಿಂದ ನೋಡಲಾಗುತ್ತಿದ್ದುದನ್ನು ಗಮನಿಸಿ ಈಗ ಬಹಳಮಟ್ಟಿಗೆ ಉತ್ತಮಸ್ಥಿತಿಗೆ ತರಲಾಗಿದೆಯೆಂದರೆ ಇದೇನೂ ಒಂದು ಅತಿಶಯೋಕ್ತಿಯಾಗಲಾರದು. ಈಗ ಈ ಸ್ಥಳಕ್ಕೇ ಒಂದು ಸಬ್‌ಡಿವಿಜ಼ನ್ ವರ್ಗಮಾಡಲಾಗಿದೆ. ಇಲ್ಲಿಗೆ ಪ್ರತ್ಯೇಕವಾಗಿ ಒಬ್ಬ ಸ್ಪೆಷಲ್ ಆಫೀಸರನ್ನೂ ನೇಮಕ ಮಾಡಲಾಗಿದೆ. ಈ ತಾಲ್ಲೂಕಿಗೆ ಅಷ್ಟು ನೀರಾವರಿ ಅನುಕೂಲತೆಗಳೇ ಇಲ್ಲದೆ ಬಹಳ ಅನಾನುಕೂಲವಾಗಿ ಹೋಗಿದ್ದರೂ, ಅಲ್ಲ ಈಗ 2-3 ದೊಡ್ಡ ದೊಡ್ಡ ಕೆಲಸ ಗಳನ್ನು ಕೈಗೊಳ್ಳಲಾಗಿದೆ. ಒಂದು ಲಕ್ಷ ಚಿಲ್ಲರೆ ಮೊಬಲಗನ್ನು ಸುವರ್ಣಮುಖಿ ನದಿಗೆ ಅಣೆಕಟ್ಟು ಹಾಕಲು ಒದಗಿಸಿರುತ್ತೆ. ಇನ್ನೂ ಅನೇಕ ಸಣ್ಣ ಸಣ್ಣ ಕಾಮಗಾರಿಗಳನ್ನೂ ಇದರ ಜೊತೆಗೆ ತೆಗೆದುಕೊಳ್ಳಲಾಗಿದೆ. ಆ ಪೈಕಿ ಈಗಾಗಲೇ 3-4 ಕೆಲಸಗಳು ಸಂಪೂರ್ಣವಾಗಿ ಮುಗಿದುಹೋಗಿ, ಇನ್ನೂ 30-40 ಕಾಮಗಾರಿಗಳ ವರ್ಕ್ ಮತ್ತು ಅಂದಾಜು ಮಂಜೂರಾಗಿ ಕೆಲಸ ಪ್ರಾರಂಭಿಸುವ ಮಟ್ಟಕ್ಕೆ ಬಂದಿವೆ. ಇದಲ್ಲಾ ಸರ್ಕಾರದವರ ಕರ್ತವ್ಯ. ಅದನ್ನು ಮಾಡ್ಲೇಮಾಡಲಾಗುತ್ತದೆ. ಈ ಬಗ್ಗೆ ಯಾರೂ ಸಂಶಯಪಡಬೇಕಾದ್ದಿಲ್ಲ ಮತ್ತು ಯಾವ ತಪ್ಪು ಭಾವನೆ ಗಳನ್ನೂ ಯಾರೂ ಭಾವಿಸಬಾರದು. ಅಂಥಾ ಯಾವ ಪಕ್ಷಪಾತಗಳನ್ನೂ ಯಾವಾಗ್ಯೂ ಮಾಡಿರುವುದಿಲ್ಲ.

ಈ ಸಂಬಂಧದಲ್ಲೇ ಇನ್ನೂ ಕೆಲಕೆಲವು ವಿಷಯ ಗಳನ್ನು ತಮ್ಮೆಲ್ಲರ ಗಮನಕ್ಕೆ ತರಬೇಕೆಂದಿದ್ದೇನೆ: Construction and improvements of river channels, tank channels, and feeder channels and miscellaneous works of small magnitude connected therewith—ಈ ಸಂಬಂಧವಾಗಿ ಶ್ರೀಮಾನ್ ಚನ್ನಬಸಪ್ಪನವರು ಯಾವ ಪ್ರದೇಶದಲ್ಲಿ ಮಳೆ ಹೆಚ್ಚಾಗಿ ಬೀಳುತ್ತಿದೆಯೋ ಅಲ್ಲಗೆ ಮಾತ್ರ ಹಣವನ್ನು ಹೆಚ್ಚು ಹೆಚ್ಚಾಗಿ ಖರ್ಚುಮಾಡಿ ಎಂಬುದಾಗಿ ತಿಳಿಸಿದರು. ಅದೇ ಉದ್ದೇಶ ಸರ್ಕಾರದವರಿಗೂ ಇದೆ. ಇದನ್ನು ಅವರು ಪಕ್ಷಪಾತದ ದೃಷ್ಟಿಯಿಂದೇನೂ ಹೇಳಿಲ್ಲ. ಒಂದು ಸದುದ್ದೇಶದಿಂದಲೇ ಹೇಳಿದ್ದಾರೆ. ಹಾಗೆಯೇ ಮರೆನಾಡಿಗೆ ಸಂಬಂಧಪಟ್ಟ ಪ್ರದೇಶಗಳಲ್ಲಿ, 130 ಸಣ್ಣ ಸಣ್ಣ ಕೆರೆ ಗಳ ರಿಪೇರಿ ನಡೆಸಬೇಕೆಂದು ಕೈಗೊಳ್ಳಲಾಗಿದ್ದ ಕಾಮಗಾರಿಗಳ ಪೈಕಿ, ಎಲ್ಲವುಗಳ ಕೆಲಸವೂ ಪೂರೈಸಿ ಇನ್ನೂ 13 ಕೆಲಸಗಳು ಬಾಕಿ ಉಳಿದಿವೆ. ಈ 13 ಕಾಮಗಾರಿಗಳ ಕೆಲಸ ಸಹ almost complete ಆಗತಕ್ಕ state ಗೆ ಬಂದಿದೆ. ಇನ್ನು ಕೇವಲ 2,500 ಅಥವಾ 3,000 ರೂಪಾಯಿಗಳ ಕೆಲಸ ಉಳಿದಿದ್ದರೆ ಹೆಚ್ಚಾಯಿತು. ಹೀಗೆ ಕಳೆದ ನಾಲ್ಕು ವರ್ಷಗಳಲ್ಲಿ ಬೇಕಾದಷ್ಟು ಕಾಮಗಾರಿಗಳನ್ನು ಕೈಗೊಂಡು ಮುಗಿ ಸಲಾಗಿದೆ. ನವಿಲೂರು ಒಂದು ಏನಾ ಬಾಕಿ ಕೆಲಸ ಗಳೆಲ್ಲಾ ಪೂರೈಸಿವೆ. ಹೀಗೆ ಈ ಗ್ರೋಮೋರ್ ಪಡ್ ಯೋಜನೆಯಲ್ಲಿ ಎಲ್ಲೆಲ್ಲಿ ಹೆಚ್ಚಿನ ಕೆಲಸಗಳು ನಡೆಯ ಬೇಕೆಂದಿತ್ತೋ ಅಲ್ಲಿ ಆ ಕೆಲಸಗಳೆಲ್ಲಾ ಈಗಾಗಲೇ ಪೂರ್ಣವಾಗಿ ಪೂರೈಸಿ, ಈ ಯೋಜನೆ ಕಾರ್ಯ ರೂಪಕ್ಕೆ ಬಂದು ನಮಗೆ ಸಾಕಷ್ಟು ಆಹಾರಧಾನ್ಯಗಳ ಉತ್ಪತ್ತಿ ಜಾಸ್ತಿಯಾಗಿದೆ. ಆದಕಾರಣ ಈ ಹಕ್ಕೋಟ ಆಜ್ಞೆಗಳನ್ನೆಲ್ಲಾ ತಪ್ಪಿಸಿಬಿಡಿ ಎಂದು ಮಾನ್ಯ ಚನ್ನಬಸ ಪ್ಪನವರು ತಿಳಿಸಿದರು. ಅವರು ತಿಳಿಸಿರುವುದೂ ಒಂದು ರೀತಿಯಲ್ಲಿ ಸರಿಯಾಗಿಯೇ ಇದೆ. ಕಾರಣ ಅವರ ಪ್ರಾಂತ್ಯದಲ್ಲಿ ಅಷ್ಟು ಚೆನ್ನಾಗಿ ಈಗ ಬೆಳೆಗಳಾಗುತ್ತಿವೆ. ಪಿರಿಯಾಪಟ್ಟಣ, ಹೆಗ್ಗಡದೇವನಕೋಟೆ ಈ ತಾಲ್ಲೂಕು ಗಳಲ್ಲಿ ಅನೇಕ ಕಾಮಗಾರಿಗಳನ್ನು ನಡೆಸಲಾಗಿದೆ. ಸಾವಲ, ಉದ್ದೂರು ಇವುಗಳಿಗೆಲ್ಲಾ ಒಂದು ಪ್ರತ್ಯೇಕ ವಾಗಿ ಧಾನಲ್ ತಂದು, ಆ ರೀತಿ ನೀರಿನ ಸರಬರಾಯಿ ಒದಗಿಸದೇ ಹೋಗಿದ್ದರೆ ಅಲ್ಲ ಇಷ್ಟೊಂದು ಅನುಕೂಲ ವಾಗಿ ಬೆಳೆಗಳಾಗುವುದಕ್ಕೆ ಅವಕಾಶವೇ ಇರುತ್ತಿರ ಲಿಲ್ಲ. ಇದನ್ನೆಲ್ಲಾ ಹೊಸದಾಗಿ ಮೊದಲಿಂದ ಪ್ರಾರಂ ಭಿಸಿ ಮಾಡತಕ್ಕ ಕೆಳಲಸಗಳೋಪಾದಿಯಲ್ಲಿ ಮಾಡಲಾ ಗಿದೆ. ಇದಕ್ಕೆ ಹಿಂದೆ ಈ ತಾಲ್ಲೂಕುಗಳಲ್ಲಿ ನೀರಿನ ಅಭಾವ ಪೂರ್ತಿಯಾಗಿದ್ದು ಜನರಿಗೆ ಬಹಳ ತೊಂದರೆ ಯಾಗಿತ್ತು. ಆದ್ದರಿಂದ ಈ ತೊಂದರೆಯನ್ನು ಹೋಗ ರಾಡಿಸಲು ಕಾವೇರಿ ವ್ಯಾಲಯಿಂದ ಲಕ್ಷ್ಮಣತೀರ್ಥದ ನೀರನ್ನು ಈ ತಾಲ್ಲೂಕಿಗೆ ತಿರುಗುವಂತೆ ಮಾಡಿ ಒಂದು ಅಂದಾಜುಪಟ್ಟಿ ತಯಾರಾಗಿದೆ. ಆ ಅಂದಾಜು ಈಗ ಸೂಪ ರ್‌ಇಂಟೆಂಡಿಗ್ ಇಂಜನಿಯರ್ ಅವರಿಗೆ ಸ್ಕ್ರುಟಿನಿ ಬಗ್ಗೆ ಹೋಗಿರುತ್ತೆ. ಅದು ಇನ್ನೇನು ಶೀಘ್ರದಲ್ಲೇ ಮಂಜೂರಾಗಿ ಬರುವ ನಿರೀಕ್ಷಣೆ ಇದೆ. ಕಳೆದ ಅಕ್ಟೋಬರ್ 15ನೇ ತಾರೀಖು ಅವರಿಂದ ನನಗೊಂದು ವರದಿ ಬಂದಿದೆ. ಅದರಲ್ಲಿ ಅವರು ಈ ಕೆಲಸ ಸ್ಕ್ರುಟಿನಿಯೆಲ್ಲಾ ಪೂರೈಸುತ್ತಾ ಬಂದಿದೆ. ಈ ಕೆಲಸವನ್ನು ತಕ್ಷಣ ಕೈಗೊಳ್ಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲ ಎಂಬು ದಾಗಿಯೂ ಮತ್ತೂ ತಕ್ಷಣ ಪ್ರಾರಂಭಮಾಡಬೇಕೆಂದು ಇಟ್ಟುಕೊಂಡಿರತಕ್ಕ ಕಾಮಗಾರಿಗಳ ಪಟ್ಟಿಗೆ ಇದನ್ನು ಸೇರಿಸಿಬಿಡಿ ಎಂಬುದಾಗಿಯೂ ತಿಳಿಸಿದ್ದಾರೆ.

ನಮ್ಮ ಮೈಸೂರಿನಲ್ಲೂ ವಿಖ್ಯಾತರಾದಂಥ ಇಂಜನಿ ಯರುಗಳಿದ್ದರು, ಈಗಲೂ ಇದ್ದಾರೆ. ಈ river valley ಗಳನ್ನು ತಿರುಗಿಸುವಂಥ ಇಂಜಿನಿಯರುಗಳು ಅಮೇರಿಕಾದೇಶ ಒಂದರಲ್ಲೇ ಅಲ್ಲ ನಮ್ಮ ಮೈಸೂರಿ ನಲ್ಲಿಯೂ ಇದ್ದಾರೆ. ಬಹಳ ಹಿಂದೆಯೇ ಸುಮಾರು 60—70 ವರ್ಷಗಳ ಹಿಂದೆಯೇ ಹಾಣಸೂರು ತಾಲ್ಲೂಕಿ ನಲ್ಲಿ ಲಕ್ಷ್ಮಣ ತೀರ್ಥ ಹೊಳೆಯನ್ನು ಹನಗೋಡು ಕಡೆಗೆ ತಿರುಗಿಸಲು ಸಾಧ್ಯವಿರುತ್ತೆಂದು ಹೇಳಿದ್ದಾರೆ. ಅದೇ ರೀತಿ ಕಪಿನೀ ನದಿಯನ್ನು ಸಹ ತಿರುಗಿಸಲು ಸಾಧ್ಯವಿದೆ ಯೆಂದು ತಿಳಿಸಿದ್ದಾರೆ. ಇದರಿಂದ ಸುಮಾರು river valley ಅಲ್ಲದೆ ಒಳಪ್ರದೇಶದಲ್ಲಿ 25 ಮೈಲಿಗಳ ತನಕ ನೀರು ಹೋಗಲು ಅವಕಾಶವಿದೆ. ಈ ಲಕ್ಷ್ಮಣ ತೀರ್ಥ ವ್ಯಾಲಯಲ್ಲಿ ಒಂದು ದೊಡ್ಡ ಪ್ರಾಜೆಕ್ಟನ್ನು ಕಟ್ಟಿದ್ದಾರೆ. ಅದಕ್ಕೆ 900 ಯೂನಿಟ್‌ಗಳ ಕೈಪ್ಯಾ ಸಿಟಿ ಇದೆ. ಆದರೆ ಯಾವ ಒಂದು ವರ್ಷದಲ್ಲೂ ಸಹ ಅದಕ್ಕೆ 100—200 ಯೂನಿಟ್ಸುಗಳಿಂತಲೂ ನೀರು ಹೆಚ್ಚಾಗಿ ಬಂದಿರುವುದಿಲ್ಲ. ಅದಕ್ಕೆ ಕಾರಣ feeder

(ಮಾನ್ಯ ಶ್ರೀ ಟಿ. ಮರಿಯಪ್ಪನವರು).

channel ಯಾವುದೂ ಇಲ್ಲದಿರತಕ್ಕದ್ದು ಒಂದು; catchment area ಕಮ್ಮಿಯಾಗಿರುವುದು ಇನ್ನೊಂದು ಈಗ ಈ ಕೆರೆಯ ಬಗ್ಗೆ ಆದಷ್ಟು ಬೇಗ ಕಾರ್ಯವನ್ನು ಕೈಗೊಂಡು ಇದನ್ನು ಅನುಕೂಲಮಾಡಿಕೊಡಲಾಗುತ್ತದೆಂಬ ಭರವಸೆಯನ್ನೂ ಸಹ ನಾನೀಗ ತಮಗೆ ನೀಡುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ ವರ್ಷ ಇದಕ್ಕೆ 55 ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ!

ಮಾನ್ಯ ಶ್ರೀ ಟಿ. ಮರಿಯಪ್ಪನವರು —ಈಗ ತಾವು ಅಷ್ಟು ಹಣವನ್ನು ಅದರ ಬಗ್ಗೆ ಒದಗಿಸಿದುದಕ್ಕಾಗಿ ನಾವು ತಮಗೆಲ್ಲಾ ಬಹಳ ಕೃತಜ್ಞರಾಗಿದ್ದೇವೆ. ಈಗ ಅದರ ಬಗ್ಗೆ ಇನ್ನೂ ಹೆಚ್ಚಿನ ಹಣವನ್ನು ಕೊಡುತ್ತೇವೆಂದು ನಮಗೆ ಕಾಗವದ ಮೇರೆ ಅವರಿಂದ ಭರವಸೆ ಬಂದಿದೆ. ಇನ್ನು ಇದರ ಬಗ್ಗೆ a little more action is to be taken. ಈಗಾಗಲೇ ನಾವು ಇದಕ್ಕೆ 10 ಲಕ್ಷದವರೆಗೂ ಖರ್ಚುಮಾಡಿದ್ದೇವೆ. ಆದರೆ ಅಷ್ಟರೊಳಗೇ ಈ ಅಧಿವೇಶನ ಬೇರೆ ಬಂದಿತು. ಆದಾಗ್ಯೂ ಕೆಲಸವನ್ನು ಮಾತ್ರ ಮುಂದುವರಿಸಲೇ ಬೇಕೆಂದು ನಾವು ತಿಳುವಳಿಕೆಯನ್ನು ಕೊಟ್ಟಿದ್ದೇವೆ. ಆದ್ದರಿಂದ ದಯವಿಟ್ಟು ಈ ಬೇಡಿಕೆಯನ್ನು ಮಾನ್ಯ ಸದಸ್ಯರ ಅಂಗೀಕಾರಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ತಿರುಮಣಿ ವಿಚಾರ ತಿಳಿಸಲಿಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ತಿರುಮಣಿ ಕಾಮಗಾರಿಯನ್ನೂ 5 ವರ್ಷ ಯೋಜನೆಯಲ್ಲಿ ಸೇರಿಸಿದ್ದೇವೆ.

ಶ್ರೀ ಟಿ. ಪಾದಯ್ಯಗೌಡರು.—ಬೆಂಗಳೂರು ಜಿಲ್ಲೆಯ ರಾಮನಗರ ತಾಲ್ಲೂಕಿನ ವಿಚಾರವೇನೂ ತಿಳಿಸಲಿಲ್ಲವಲ್ಲ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ರಾಮನಗರಂ ತಾಲ್ಲೂಕಿಗೆ ಇಲ್ಲಿಯವರೆಗೆ ಖರ್ಚು ಮಾಡಿರತಕ್ಕದ್ದು ಸ್ವಲ್ಪ ಕಮ್ಮಿಯಾಗೇ ಇರುತ್ತೆ. ಆದರೆ ಇತ್ತೀಚೆಗೆ ಅಲ್ಲಿಯೂ ಸಹ 2-3 ದೊಡ್ಡ ಕೆಲಸಗಳನ್ನು ಕೈತಕೊಳ್ಳಲಾಗಿದೆ. ಆ ಬಗ್ಗೆ ಅಲ್ಲಿಗೆ ಒಬ್ಬ ಗ್ರಾಜುಯೇಟ್ ಸರ್ವೇಯರನ್ನು ಸ್ಪೆಷರ್ ಆಗಿ ನೇಮಕ ಮಾಡಲಾಗಿದೆ. ಅನೇಕ ಸಣ್ಣ ಪುಟ್ಟ ಅಣೆಗಳನ್ನೂ, ಪಿಕ್ ಅಪ್‌ಗಳನ್ನು ಮಾಡಿದ್ದೇವೆ. ಅವುಗಳ ಜೊತೆಗೆ ಈಗ 3 ದೊಡ್ಡ ಪ್ರಾಜೆಕ್ಟ್‌ಗಳನ್ನೂ ಸಹ ಕೈಗೊಳ್ಳಲಾಗಿದೆ. ಆದರೆ ಇಲ್ಲಿ ಅಂಥಾ ದೊಡ್ಡ ಕಾಮಗಾರಿಗಳನ್ನು ಕೈಗೊಳ್ಳಲು ನೀರಿನ ಅನುಕೂಲತೆಯಿಲ್ಲ. ನದಿಗಳೆಲ್ಲಾ ಬಹಳ flat ಆಗಿವೆ. ಅಚ್ಚುಕಟ್ಟು ಸಹ ಅಷ್ಟು ಜಾಸ್ತಿ ಬರುವುದಿಲ್ಲ. ವಿಖ್ಯಾತ ಇಂಜಿನಿಯರುಗಳೆಲ್ಲಾ ಈ ಕೆಲಸಗಳು ಅಷ್ಟು ರಾಭದಾಯಕವಾಗಿಲ್ಲವೆಂದು ತಿಳಿಸಿರುತ್ತಾರೆ. ಈ ಕಾಮಗಾರಿಗಳನ್ನು ಮಾಡಿಸಲು ವಿಶೇಷ ಖರ್ಚು ಬಂದು ಅದರಿಂದ ಬರತಕ್ಕ ಪ್ರತಿಫಲ ತೀರಾ ಕಮ್ಮಿ ಇರುವುದರಿಂದ ಇವುಗಳನ್ನು ಕೈಗೊಳ್ಳುವುದು ಸೂಕ್ತವಲ್ಲವೆಂದು ಅವರು ತಿಳಿಸಿದ್ದಾರೆ. ಹೀಗೆ ರಾಮನಗರ ತಾಲ್ಲೂಕಿನ 2 ಅಣೆಕಟ್ಟುಗಳೂ ಮತ್ತು ಹುಣಸನಹಳ್ಳಿ ಈ ಮೂರು ರಾಭದಾಯಕವಾದ ಕಾಮಗಾರಿಗಳಲ್ಲವೆಂದು ಅವರು ತಿಳಿಸಿರುತ್ತಾರೆ. ಎಲ್ಲೆ ಒಂದು ಎಕರೆಗೆ ೪೦೦ ರೂಪಾಯಿಗಳಿಗಿಂತಲೂ ಹೆಚ್ಚಿನ ಖರ್ಚನ್ನು ಹಾಕಿ ಕೆಲಸ ನಡೆಸಬೇಕಾಗುತ್ತದೋ ಅಂಥಾ ಕಡೆಗಳಲ್ಲಿ ಆ ಕೆಲಸಗಳನ್ನೇ ಕೈಬಿಡಬೇಕೆಂದು ಕೇಂದ್ರದಿಂದ ಬೇರೆ ಈ ಬಾಬ್ತಿನಲ್ಲಿ ಒಂದು ತಿಳುವಳಿಕೆಯನ್ನು ಅವರು ಕೊಟ್ಟಿರುತ್ತಾರೆ. ಆ ಕಾರಣದಿಂದ ಈ ಕೆಲಸಗಳನ್ನು ಕೈಬಿಡಬೇಕಾಗಿ ಬಂತು.

ಇನ್ನು ಕಾನಕಾನಹಳ್ಳಿ ತಾಲ್ಲೂಕಿನ ಬಗ್ಗೆ 3 ದೊಡ್ಡ ಯೋಜನೆಗಳನ್ನು ಮಾಡಲಾಗಿದೆ. ಇದರ ಜೊತೆಗೆ ಇನ್ನೂ 8-10 ಕಾಮಗಾರಿಗಳೂ ಈಗಾಗಲೇ ಮಂಜೂರಾಗಿರುತ್ತವೆ.

ಶ್ರೀ ಟಿ. ಪಾದಯ್ಯಗೌಡರು.—ಅರ್ಕಾವತಿ ಮತ್ತು ಕಣ್ವ ಈ ನದಿಗಳಿಗೆ ಅಣೆಕಟ್ಟೆ ಹಾಕುವ ವಿಚಾರವನ್ನು ಬಹಳ ದಿವಸಗಳಿಂದಲೂ ಹೇಳುತ್ತಿದ್ದುದು ಏನಾಯಿತು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವುಗಳನ್ನು ವಿಚಾರ ಮಾಡಿ examine ಮಾಡಿಸುತ್ತೇನೆ. ಆದರೆ ಸಾಗುವಳಿಗೆ ಬಹಳ ಕಡಿಮೆ ಎಕರೇಜ್ ಬರಬಹುದು. ಪುನಃ ಅದನ್ನು ಪರಿಶೀಲನೆ ಮಾಡಿಸಿನೋಡುತ್ತೇನೆ. ಈಗ ಈ ಬೇಡಿಕೆಯನ್ನು ತಾವೆಲ್ಲರೂ ದಯೆಯಿಟ್ಟು ಅಂಗೀಕರಿಸಬೇಕೆಂದು ಹೇಳುತ್ತೇನೆ.

**Sri T. MADIAH GOWDA.**—Sir, I seek the leave of the House to withdraw my cut motion.

*The cut motion was, by leave, withdrawn.*

---

## Construction of Gundumgere Project.

**Sri S. R. GURU** (Bangalore District—General).—My cut motion reads like this :

"That the demand under the head "18. Other Revenue Expenditure financed from Ordinary Revenues" for Rs. 17,50,000 be reduced by Re. 1 (to urge upon the Government to sanction immediately and take up for construction the Gundumgere Project in Sasalu Hobli of Dodballapur Taluk.)"

ಇದರ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಆ ಹೋಬಳಿಯಲ್ಲಿ ಸಾಮಾನ್ಯವಾಗಿ ಮೇಜರ್ ಕೆರೆಯಾವುದೂ ಇಲ್ಲ. ನಾಲ್ಕೈದು ಕೆರೆಗಳಿದ್ದರೂ ಅವು ಲೆಕ್ಕಕ್ಕೆ ಮಾತ್ರ ಇವೆಯೇ ಹೊರತು ಹೆಚ್ಚು ಬತ್ತ ಬೆಳೆಯುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಈ ವಿಷಯವನ್ನು ಹಿಂದೆ ಮಾನ್ಯ ಸಚಿವರ ಗಮನಕ್ಕೆ ತಂದಾಗ 1951ನೆಯ ಇಸವಿಯೊಳಗೆ ಷಾರ್ಟ್ ಟರ್ಮ್ ಪ್ರಾಜೆಕ್ಟ್‌ಗಳನ್ನು ಮುಗಿಸಿ ಆಮೇಲೆ ಈ ದೊಡ್ಡ ಪ್ರಾಜೆಕ್ಟನ್ನು ತೆಗೆದುಕೊಳ್ಳುತ್ತೇವೆಂದು ಅವರು ಭರವಸೆ ಕೊಟ್ಟಿದ್ದರು. ಎರಡು ಮೂರು ಸಾರಿ ಅದಾದ ಮೇಲೆ ವಿಚಾರ ಮಾಡಿದಾಗ್ಯೂ ಅದು ನಿಧಾನವಾಗುತ್ತಿದೆ. ಆದ್ದರಿಂದ ಆ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಆದಷ್ಟು ಬೇಗ ಮಾಡಿಕೊಡಬೇಕೆಂದು ಕೇಳುವುದೇ ಈ ಪ್ರೋತಾ ನಿರ್ಣಯದ ಉದ್ದೇಶವಾಗಿದೆ.

**Mr. SPEAKER.**—Cut motion moved :

"That the demand be reduced by Re. 1"

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಸ್ವಾಮಿ, ಮಾನ್ಯ ಮಿತ್ರರು ಈ ವಿಷಯವನ್ನು ಗಮನಕ್ಕೆ ತಂದಿದ್ದಾರೆ. ಇದನ್ನು ಪರಿಶೀಲನ

ಬೇಕಾದ್ದು ಬಹಳ ಅಗತ್ಯವೆಂದು ತಿಳಿದುಕೊಂಡಿದ್ದೇನೆ. ಚೆಕ್ಕಿಕರ್ ಅಭಿಪ್ರಾಯ ಪ್ರಕಾರ ಇದು ಕೇವಲ ಪ್ರಾಕಿಬಿಜರಲಿ costly ಆದ ಐಟಂ ಎಂದು ಕಂಡುಬಂದಿದೆ. ಪುನಃ ಪರಿಶೀಲಿಸಿ ಅನಾವಶ್ಯಕವಾದ ಐಟಂಗಳನ್ನು ಖೋತಾ ಮಾಡಿ ಇದನ್ನು ಮಾಡುವುದಕ್ಕೆ ಸಾಧ್ಯವಾದರೆ ಮಾಡುತ್ತೇವೆ. ಆದಷ್ಟು ಬೇಗ ಪರಿಶೀಲಿಸುತ್ತೇವೆಂದು ಭರವಸೆ ಕೊಡುತ್ತೇನೆ.

**Sri S. R. GURU.**—I seek the leave of the House to withdraw my cut motion.

*The cut motion was, by leave, withdrawn.*

---

## Construction of Major Tank near Kanikenahalli in Sasalu Hobli.

**Sri S. R. GURU.**—The other cut motion standing against my name reads like this:

"That the demand under the head "18. Other Revenue Expenditure financed from Ordinary Revenue" for Rs. 17,50,000 be reduced by Re. 1 (to draw the attention of the Government to the urgent necessity for constructing major tank near Kanikenahalli in Sasalu Hobli of Dodballapur Taluk.)"

ಇದೇ ಹೋಬಳಿಯಲ್ಲಿ ಸುಮಾರು ಹತ್ತು ಮೈಲಿ ಯಾಚೆ ಕೆರೆ ಕಟ್ಟುವುದಕ್ಕೆ ಪ್ರದೇಶವಿದೆ. ಅಲ್ಲಿ ಯಾವುದೂ ನರಿಯಾದ ಕೆರೆಯಿಲ್ಲ. ಆ ಪ್ರದೇಶದ ರೈತರು ಈ ಕೆರೆ ಕಟ್ಟಬೇಕೆಂದು ಸುಮಾರು 1902 ನೆಯ ಇಸವಿಯಿಂದಲೂ ಸರಕಾರದ ಗಮನದಲ್ಲಿದ್ದು ಅದರ ಬಗ್ಗೆ ಒಂದು ಪ್ಲಾನ್ ಕೂಡ ತಯಾರಾಗಿತ್ತು ಎಂದು ನನಗೆ ಹೇಳಿದರು. ಆದರೂ ಇದುವರೆಗೂ ಏನೂ ಮಾಡಿರುವುದಿಲ್ಲ. ಅದನ್ನು ಸರ್ಕಾರದ ಗಮನಕ್ಕೆ ತಂದು ಸದರಿ ಕೆರೆಯನ್ನು ಮಾಡಿಸಿಕೊಡಬೇಕೆಂಬ ಉದ್ದೇಶದಿಂದ ಈ ಖೋತಾ ನಿರ್ಣಯವನ್ನು ತಂದಿರುತ್ತೇನೆ.

**Mr. SPEAKER.**—Cut motion moved:

"That the demand be reduced by Re. 1"

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಮೊದಲೇ ಹೇಳಿದ ಹಾಗೆ ಕೆರೆ ವಿಚಾರದಲ್ಲಿ ಯಾವಾಗಲೂ ಸರ್ಕಾರದವರು ಅಡ್ಡಿ ಮಾಡಿಲ್ಲ. ಎಷ್ಟು ಸಾಧ್ಯವೋ ಅಷ್ಟು ಈ ವಿಚಾರದಲ್ಲಿ ಸಹಾಯ ಮಾಡಬೇಕೆಂಬುದೇ ಸರ್ಕಾರದ ಉದ್ದೇಶ. ಪೂರ್ವದಲ್ಲಿ ಕಟ್ಟಿರುವುದನ್ನೂ ಜೀರ್ಣೋದ್ಧಾರ ಮಾಡಬೇಕಾದ್ದು ಅಗತ್ಯ. ತಾವು ಕೇಳಿರುವ ವಿಷಯವನ್ನು ಆದಷ್ಟು ಜಾಗ್ರತೆ ಪರಿಶೀಲಿಸುತ್ತೇವೆ.

ಶ್ರೀ ಎಂ. ಎಸ್. ಜೋಯಿಸರು (ಮೈಸೂರು ಜಿಲ್ಲೆ).—ತಮ್ಮ ಕಾಲದಲ್ಲೇ ಜೀರ್ಣೋದ್ಧಾರದ ಕೆಲಸವಾಗಬೇಕು.

**Sri S. R. GURU.**—I seek the leave of the House to withdraw my cut motion.

*The cut motion was, by leave, withdrawn.*

---

**Mr. SPEAKER.**—Sri L. Siddappa is not here. So we will take up the other cut motions tomorrow.

*The House adjourned at Twenty-five Minutes past Three of the Clock to meet again at Thirty Minutes past Eight of the Clock on Saturday the 3rd November 1951.*

---

WD 1046—GPB—500—22-3-52